ಬೆಲೆ ರೂ.2.50
D.O.P - 15th of every month at Udupi Sorting Office

Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in
RAMDEV ENTERPRISES
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2016

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-16 ಸಂಚಿಕೆ-4 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಕುಂಜಿಬೆಟ್ಟಿನಲ್ಲಿ ಶ್ರೀ ಶಾರದಾದೇವಿಯ ಪ್ರತಿಷ್ಠಾ ಮಹೋತ್ಸವ

ಮೀನ ಮಾಸದ ಸಂಕ್ರಮಣದ ದಿನವು ಕುಂಜಿಬೆಟ್ಟಿನ ಶ್ರೀ ಶಾರದಾದೇವಸ್ಥಾನದ ಶ್ರೀ ಶಾರದಾದೇವಿಗೆ ಪ್ರತಿಷ್ಠಾಮಹೋತ್ಸವದ ದಿನ. ಈ ವರ್ಷ ತಾ.14–03–2016ರ ಸೋಮವಾರವು ಪ್ರತಿಷ್ಠಾಮಹೋತ್ಸವದ ದಿವಸ. ಅಂದು ಬೆಳಿಗ್ಗೆ ಎಂಟು ಗಂಟೆಗೆ ನಮ್ಮ ಸಮಾಜದ ಋತ್ವಿಜರಾದ ಶ್ರೀ ಜಗದೀಶ ಉಪಾಧ್ಯಾಯರು, ಸುಬ್ರಹ್ಮಣ್ಯ ಉಪಾಧ್ಯಾಯರು, ಭವಾನಿಶಂಕರ ಉಪಾಧ್ಯಾಯರು, ಶ್ರೀ ಶಿವ ಭಟ್ ಹಾಗೂ ದೇವಳ ಅರ್ಚಕರಾದ ಶ್ರೀ ಧರಣೀಶ ಭಟ್ಟರು ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾವ್, ಕಾರ್ಯದರ್ಶಿ ಶ್ರೀ ಕೊಕ್ರಾಡಿ ಸುರೇಶ್‌ರಾವ್, ಕೋಶಾಧಿಕಾರಿ ಶ್ರೀ ಸುಧಾಕರರಾವ್ ಹಾಗೂ ಅನೇಕ ಸಮಾಜ ಬಾಂಧವರು ನೆರೆದು ಶ್ರೀ ದೇವಿಗೆ ಪ್ರಾರ್ಥನೆಗೈದ ನಂತರ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾದವು. ರುದ್ರ,





ಪುರುಷಸೂಕ್ತ, ಶ್ರೀ ಸೂಕ್ತ, ದುರ್ಗಾ ಸೂಕ್ತ, ದೇವಿ ಸೂಕ್ತಗಳ ಪಾರಾಯಣದೊಂದಿಗೆ ದೇವಿಗೆ ಪಂಚಾಮೃತಾಭಿಷೇಕ, ಗಣಹೋಮ ಇತ್ಯಾದಿ ಕಾರ್ಯಕ್ರಮಗಳು ಕ್ರಮವಾಗಿ ನೆರವೇರಿದವು. ಮಹಿಳಾವೇದಿಕೆಯ ಸದಸ್ಯರಿಂದ ಭಜನೆ, ಲಲಿತಾಸಹಸ್ರನಾಮ ಪಾರಾಯಣ, ಖಡ್ಗಮಾಲಾ ಪಾರಾಯಣ, ಸಪ್ತಶತಿ ಪಾರಾಯಣ ನಡೆಯಿತು. ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ರಜತ ಸಿಂಹಾಸನದಲ್ಲಿ ವಿರಾಜಮಾನಳಾಗಿದ್ದ ದೇವಿಯನ್ನು ವಜ್ರ ಹಾಗೂ ಬಂಗಾರದ ಆಭರಣಗಳು ಹಾಗೂ ಪುಷ್ಪಗಳಿಂದ ಅಲಂಕರಿಸಿ ಮಹಾಪೂಜೆಯನ್ನು ಭಕ್ತಿಯಿಂದ ಮಾಡಿದರು. ಉತ್ಸವಕ್ಕೆ ಸುಮಾರು ಇನ್ನೂರು ಜನ ಸಮಾಜಬಾಂಧವರು ಹಾಗೂ ಪರಿಸರದ ಭಕ್ತರು ಆಗಮಿಸಿದ್ದು ಉತ್ಸವವು ಅದ್ದೂರಿಯಿಂದ ನೆರವೇರಿತು. ಬಂದ ಭಕ್ತರಿಗೆ ಪ್ರಸಾದರೂಪವಾಗಿ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಆಗಮಿಸಿದ್ದ ಭಕ್ತರು ಪ್ರತೀ ತಿಂಗಳ 14 ರಂದು ಅಂಚೆಗೆ ರವಾನೆಯಾಗುವ ಶ್ರೀ ಶಾರದಾ ಪತ್ರಿಕೆಯನ್ನು ಅಂಚೆಗಾಗಿ ಸಿದ್ಧಪಡಿಸುವ ಕೆಲಸದಲ್ಲೂ ಸಂಘಕ್ಕೆ ನೆರವಾದರು. ಉತ್ಸವದ ಕಾರ್ಯಕ್ರಮಗಳ ಯಶಸ್ಸಿಗೆ ನೆರವಾದ ಕಾರ್ಯಕರ್ತರಿಗೆ, ಪುರೋಹಿತರಿಗೆ, ಭಕ್ತರಿಗೆ ಆಡಳಿತ ಮಂಡಳಿಯು ಧನ್ಯವಾದವನ್ನು ಅರ್ಪಿಸಿದೆ.

## ಉದಯಾದ್ರಿಯಲ್ಲಿ ರಜತೋತ್ಸವ





ಪಡುಬಿದ್ರೆಯ ಉದಯಾದ್ರಿ ಕ್ಷೇತ್ರದ ಪರಿಚಯವನ್ನು ನಮ್ಮ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಮಾಡಿದ್ದೆವು. ಶ್ರೀ ಕ್ಷೇತ್ರದಲ್ಲಿ ಆಡಳಿತ ಮಂಡಳಿಯು ಭಕ್ತರ ಸಹಕಾರದೊಂದಿಗೆ ಬಾಲಗಣಪತಿ ಹಾಗೂ ಪ್ರಸನ್ನಪಾರ್ವತೀ ದೇವರಿಗೆ ಸೇವಾ ರೂಪದಲ್ಲಿ ಸುಮಾರು ಆರೂವರೆ ಕೆ.ಜಿಯ ಬೆಳ್ಳಿಯ ಮುಖವಾಡ ಹಾಗೂ ಪರಿಕರಗಳ ಸಮರ್ಪಣೆಯು ತಾ.08–04–2016ರಂದು ಶುಕ್ರವಾರ ನೆರವೇರಿತು.

ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಈ ಕಾರ್ಯಕ್ರಮವು ಜರಗಿತು. ಬ್ರಹ್ಮಶ್ರೀಗಳಾದ ನಾಗಭೂಷಣ ಶಾಸ್ತ್ರಿ, ಸುಬ್ರಮಣ್ಯ ಉಪಾಧ್ಯಾಯ, ಭವಾನಿಶಂಕರ ಉಪಾಧ್ಯಾಯ, ಕೃಷ್ಣರಾಜ ಭಟ್, ಕ್ಷೇತ್ರದ ಅರ್ಚಕರಾದ ಶ್ರೀ ನಯನಾಭಿರಾಮ ಸ್ವಾಮಿ ಮತ್ತು ಜಗಧಾಭಿರಾಮ ಸ್ವಾಮಿ ಇತ್ಯಾದಿ ಋತ್ವಿಜರು ಅವರಿಗೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಹಕರಿಸಿದರು. ಸಂಕಲ್ಪ ಹಾಗೂ ಪ್ರಾರ್ಥನೆಯ ನಂತರ ಗಣಹೋಮ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವಿಧಿವತ್ತಾಗಿ ಬೆಳ್ಳಿಯ ಆಭರಣಗಳನ್ನು ದೇವರಿಗೆ ಸಮರ್ಪಿಸಲಾಯಿತು, ನಂತರ ರಜತಾಭರಣಗಳಿಂದ ಅಲಂಕೃತರಾದ ದೇವರುಗಳಿಗೆ ಮಹಾಪೂಜೆ, ಮಂಗಳಾರತಿ ನೆರವೇರಿತು. ಸುಮಾರು ಐನೂರುಜನ ಭಕ್ತರು ಹಾಗೂ ನಮ್ಮ ವಿವಿಧ ಸಂಘಗಳ ಸದಸ್ಯರು ದೂರದೂರಿನಿಂದ ಆಗಮಿಸಿದ್ದರು. ನಂತರ ಅನ್ನಸಂತರ್ಪಣೆ ನಡೆಯಿತು.

ನಮ್ಮ ಸಮಾಜದ ಸುಮಾರು ಹದಿನಾರು ದೇವಳಗಳಿಗೆ ತಂತ್ರಿಗಳಾಗಿ ಮಾರ್ಗದರ್ಶನವನ್ನು ನೀಡುತ್ತಿರುವ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳಿಗೆ ಪಡುಬಿದ್ರೆ ಸಂಘ, ದೇವಳ ಹಾಗೂ ಅಭಿಮಾನಿಗಳಿಂದ ಅಭಿನಂದನಾ ಕಾರ್ಯಕ್ರಮವು ನೆರವೇರಿತು.

ಉಡುಪಿಯ ಸಂಘದಿಂದ ಶ್ರೀ ವಾಸುದೇವ ರಾವ್, ಡಾ। ವೈ. ಸುದರ್ಶನರಾವ್, ಯು.ಪ್ರಫುಲ್ಲಚಂದ್ರ ರಾವ್, ಸಿ.ಎಸ್.ರಾವ್ ಕಾರ್ಯಕ್ರಮವನ್ನು ಪ್ರತಿನಿಧಿಸಿ ಶ್ರೀ ದೇವರದರ್ಶನ ಪಡೆದರು.

ಕಳೆದ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಪಡುಬಿದ್ರೆಯ ಇನ್ನೊಂದು ಪುರಾತನ ದೇವಸ್ಥಾನವಾದ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಾಲಯದಲ್ಲಿ ರಜತ ಮಹೋತ್ಸವ ನೆರವೇರಿದ್ದು ಭಕ್ತರ ಮನದಲ್ಲಿ ಹಸಿಯಾಗಿರುವಂತೆಯೇ, ಪಡುಬಿದ್ರಿಯ ಉತ್ಸಾಹೀ ಸಮಾಜಬಾಂಧವರು ತಮ್ಮ ಊರಿನ ಇನ್ನೊಂದು ದೇವಾಲಯವಾದ ಬಾಲಗಣಪತಿ ಹಾಗೂ ಪ್ರಸನ್ನ ಪಾರ್ವತೀ ದೇವರಿಗೂ ರಜತಮಹೋತ್ಸವ ನೆರವೇರಿಸಿ ಅಭಿನಂದನಾರ್ಹರಾಗಿದ್ದಾರೆ.


ಫೋಟೋ ಕೃಪೆ : ಟಿ.ವಿಶ್ವನಾಥ ಶ್ಯಾನುಭೋಗ್

## ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳಿಗೆ ಸನ್ಮಾನ



ತಾ.08–04–2016ರಂದು ಪಡುಬಿದ್ರಿ ಉದಯಾದ್ರಿ ಕ್ಷೇತ್ರದಲ್ಲಿ ರಜತೋತ್ಸವದ ಸಂದರ್ಭದಲ್ಲಿ ನಮ್ಮ ಸಮಾಜದ ಹದಿನಾರು ದೇವಸ್ಥಾನಗಳಿಗೆ ತಂತ್ರಿಗಳಾಗಿ ಸೇವೆ ಸಲ್ಲಿಸುತ್ತಿರುವ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳವರನ್ನು ನಮ್ಮ ಸಮಾಜದ ವಿವಿಧ ಸಂಘಗಳ ಪದಾಧಿಕಾರಿಗಳು, ಪಡುಬಿದ್ರಿ ಸಂಘದ ಪದಾಧಿಕಾರಿಗಳು, ಉದಯಾದ್ರಿ ಕ್ಷೇತ್ರದ ಆಡಳಿತ ಮಂಡಳಿ ಹಾಗೂ ಅಭಿಮಾನಿಗಳು ಸನ್ಮಾನಿಸಿದರು. ಪಾವಂಜೆ ವಾಗೀಶ ಶಾಸ್ತ್ರಿಗಳು ದ್ವಿವೇದಿ ಸೀತಾರಾಮ ಶಾಸ್ತ್ರಿ ಹಾಗೂ ಸಾವಿತ್ರಿ ದಂಪತಿಗಳ ಪುತ್ರ. ಸುರತ್ಕಲ್‌ನ ಗೋವಿಂದದಾಸ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಸನ್ಮಾನಕ್ಕೆ ಉತ್ತರಿಸಿದ ಅವರು ಶೃಂಗೇರಿ ಜಗದ್ಗುರುಗಳ ಕೃಪೆ ಹಾಗೂ ಆಶೀರ್ವಾದದಿಂದ ತಾನು ಈ ಕ್ಷೇತ್ರದಲ್ಲಿ ಈ ವಿದ್ಯೆಯನ್ನು ಕಲಿತು ಈ ಮಟ್ಟಕ್ಕೇರಲು ಸಾಧ್ಯವಾಯಿತು. ಸಮಾಜ ಬಾಂಧವರು ಧಾರ್ಮಿಕ ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕೆಂದು ಕರೆಯಿತ್ತರು. ಪಡುಬಿದ್ರಿ ಸಭಾದವರು ವಾಗೀಶ ಶಾಸ್ತ್ರಿಗಳಿಗೆ ದೇವತಾ ಕಾರ್ಯಕ್ಕೆ ಉಪಯೋಗಿಸಲು ಬೆಳ್ಳಿಯ ಕಮಂಡಲವನ್ನು ನೆನಪಿನಕಾಣಿಕೆಯಾಗಿ ನೀಡಿದರು.

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ),** ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ನಮ್ಮ ಸಂಘದ ಆಶ್ರಯದಲ್ಲಿ

### ಶ್ರೀ ಶಂಕರ ಜಯಂತಿ ಆಚರಣೆಯು

**ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನಂ ಉಡುಪಿ ಜಿಲ್ಲೆ ಹಾಗೂ ಜ್ಞಾನಭಾರತಿ ಉಡುಪಿ**

ಇವರ ಸಹಯೋಗದೊಂದಿಗೆ

**ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ ತಾ.11–05–2016ನೇ ಬುಧವಾರ ನೆರವೇರಲಿದೆ.**

**ಸರ್ವರಿಗೂ ಆದರದ ಸ್ವಾಗತ :**

**– ಕಾರ್ಯದರ್ಶಿ**

**ಕಾರ್ಯಕ್ರಮಗಳ ವಿವರ** : ಬೆಳಿಗ್ಗೆ 8–00 ಗಂಟೆಗೆ ಪ್ರಾರ್ಥನೆ, ರುದ್ರಾಭಿಷೇಕ, ಪಾರಾಯಣ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ ಗಂಟೆ 11–00ಕ್ಕೆ ಪ್ರವಚನ, ಮಧ್ಯಾಹ್ನ 12–30ಕ್ಕೆ ಅನ್ನಸಂತರ್ಪಣೆ.

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಮುಂದಿನ ತಿಂಗಳು ನಮಗೆ ಶ್ರೀ ಶಂಕರ ಜಯಂತಿಯ ಸಂಭ್ರಮ. ಭಾರತದ ಧಾರ್ಮಿಕ ಇತಿಹಾಸದಲ್ಲಿ ತಮ್ಮ ಮೇರು ವ್ಯಕ್ತಿತ್ವದಿಂದ ಪ್ರಸಿದ್ಧರಾದ ಹಾಗೂ ಜಾಗತಿಕವಾಗಿ ತತ್ವಜ್ಞಾನಕ್ಕೆ ಅಮೋಘ ಕೊಡುಗೆ ನೀಡಿರುವ ನಮ್ಮ ಜಗದ್ಗುರುಗಳಾದ ಶ್ರೀ ಶ್ರೀ ಆದಿಶಂಕರಾಚಾರ್ಯರು ಭೂಮಿಗೆ ಅವತರಿಸಿದ ದಿನದ ಆಚರಣೆಯ ದಿವಸ.

ಆದರೆ ಆಚಾರ್ಯರು ಹುಟ್ಟಿದ ಕಾಲ, ದಿನದ ಬಗ್ಗೆ ನಿಖರವಾದ ಐತಿಹಾಸಿಕ ದಾಖಲೆಗಳಿಲ್ಲ. ಆಚಾರ್ಯರೇ ರಚಿಸಿದ ಕೆಲವು ಭಾಷ್ಯಗಳು, ಅವರ ಶಿಷ್ಯರನೇಕರು ರಚಿಸಿದ ಗ್ರಂಥಗಳು, ಅದರಲ್ಲಿ ಕಂಡುಬರುವ ಉಲ್ಲೇಖಗಳ ಕಾಲ ನಿರ್ಣಯ. ಇನ್ನು ಕೆಲವು ಈಗಾಗಲೆ ಕಾಲನಿರ್ಣಯ ಆಗಿರುವ ಗ್ರಂಥಗಳಲ್ಲಿ ಆಚಾರ್ಯರ ಬಗೆಗಿರುವ ಉಲ್ಲೇಖಗಳಿಂದ ಆಚಾರ್ಯರ ಜೀವಿತದ ಕಾಲದ ಬಗ್ಗೆ ಒಂದು ಅಂದಾಜು ನಿರ್ಣಯಕ್ಕೆ ಇತಿಹಾಸಕಾರರು ಬರಬಹುದಷ್ಟೇ. ಈ ಎಲ್ಲಾ ಐತಿಹಾಸಿಕ ಆಧಾರಗಳ ಸಾಕ್ಷಿಯಿಂದ ಆಚಾರ್ಯರ ಕಾಲಮಾನ ಸರಿಸುಮಾರು ಆರರಿಂದ ಏಳನೆಯ ಶತಮಾನ, ಕ್ರಿ.ಶ. 688–720 ಆಗಿರಬಹುದೆಂದು ಒಂದು ಊಹೆ.

ವಿಜಯನಗರದ ಸಂಸ್ಥಾಪಕರೆಂದು ಹೆಸರುವಾಸಿಯಾಗಿರುವ ಶ್ರೀ ಶ್ರೀ ವಿದ್ಯಾರಣ್ಯ ಯತಿಗಳು ರಚಿಸಿರುವ ಶ್ರೀ ಮಾಧವೀಯ ಶ್ರೀಮಚ್ಛಂಕರ ದಿಗ್ವಿಜಯ ಎಂಬ ಗ್ರಂಥದಲ್ಲಿ ಶ್ರೀ ಶಂಕರರ ಜನನವು ವೈಶಾಖ ಶುದ್ಧ ಪಂಚಮಿಯ ದಿವಸವಾಗಿತ್ತೆಂದು ಬರೆಯಲಾಗಿದೆ. ಈ ದಿನವನ್ನೇ ಪ್ರತೀ ವರ್ಷವೂ ಶ್ರೀ ಶಂಕರ ಜಯಂತಿ ಎಂದು ಆಚರಿಸಲಾಗುತ್ತಿದೆ.

ಅದ್ವೈತ ಸಿದ್ಧಾಂತವು ಸನಾತನ ಧರ್ಮದ ತಳಹದಿ. ಇತರ ಧರ್ಮ ಗ್ರಂಥಗಳನ್ನು ಅಧ್ಯಯನ ಮಾಡಿದಾಗ ಅವು ಸನಾತನ ಧರ್ಮದ ತತ್ವಗಳನ್ನೇ ಎರವಲು ತೆಗೆದುಕೊಂಡಿರುವಂತೆ ಭಾಸವಾಗುತ್ತದೆ. ಶ್ರೀ ಶಂಕರಾಚಾರ್ಯರು ಉಪನಿಷತ್ತುಗಳಲ್ಲಿ ಅಡಕವಾಗಿದ್ದ ಅದ್ವೈತ ಸಿದ್ಧಾಂತವನ್ನು ಎತ್ತಿ ತೋರಿಸಿ ತತ್ವಜ್ಞಾನಿಗಳಿಗೆ ಜ್ಞಾನದ ದೀವಟಿಗೆಯನ್ನು ಹಚ್ಚಿ ತೋರಿಸಿದ್ದಾರೆ. ಹಾಗಾಗಿ ಅವರ ಜನ್ಮದಿನವನ್ನು ತತ್ವಜ್ಞಾನಿಗಳ ದಿವಸವೆಂದು ಆಚರಿಸುವುದು ಅತ್ಯಂತ ಉಚಿತವಾಗಿಯೇ ಇದೆ.

ಶ್ರೀ ಶಾರದಾ ಮಂಟಪದಲ್ಲೂ ಶ್ರೀ ಶಂಕರ ಜಯಂತಿಯನ್ನು ಅದ್ದೂರಿಯಿಂದ ಹಾಗೂ ಭಕ್ತಿಭಾವದಿಂದ ಆಚರಿಸಲಾಗುತ್ತದೆ. ಈ ಸಂವತ್ಸರದ ವೈಶಾಖ ಮಾಸದ ಐದನೇ ದಿನ ಮೇ ತಿಂಗಳ ಹನ್ನೊಂದನೇ ತಾರೀಖಿನ ಬುಧವಾರ ಶಂಕರ ಜಯಂತಿ ಬರುತ್ತದೆ. ಅಂದು ಬ್ರಹ್ಮೋಪದೇಶ ಪಡೆದು ಕೊಳ್ಳುವುದಾದರೆ ವಟುಗಳಿಗೆ ಅತ್ಯಂತ ಪ್ರಶಸ್ತವಾದ ಮುಹೂರ್ತ. ಹಾಗಾಗಿ ನಮ್ಮ ಸಮಾಜದ ವಟುಗಳಿಗೆ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಶ್ರೀ ಶಾರದಾ ದೇವಸ್ಥಾನದಲ್ಲಿ ರುದ್ರಾಭಿಷೇಕ, ಪಾರಾಯಣದ ನಂತರ ಶ್ರೀ ಶಂಕರರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ ನಡೆಯುತ್ತದೆ. ನಂತರ ಪ್ರವಚನಕಾರರಿಂದ ಶ್ರೀ ಶಂಕರಾಚಾರ್ಯರ ಬಗ್ಗೆ ಪ್ರವಚನವಿದೆ. ನಂತರ ಅನ್ನಸಂತರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಗಲಿದೆ. ನಮ್ಮೆಲ್ಲಾ ಸಮಾಜಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಗುರುಗಳ ಕೃಪೆಗೆ ಪಾತ್ರರಾಗಲು ಕೋರುತ್ತಿದ್ದೇವೆ.


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ


ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-8

-ಶ್ರೀ ಬಿ. ಜಯರಾಮ ರಾವ್

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಡುಬಿದ್ರೆ, ಉಡುಪಿ ತಾಲೂಕು





ಸುಮಾರು ಏಳುನೂರು ವರ್ಷಗಳ ಹಿಂದೆ ಗ್ರಾಮದೇವರಾಗಿದ್ದ ಪಾದೆಬೆಟ್ಟಿನ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂಜಾಕೈಂಕರ್ಯವನ್ನು ಕೈಗೊಳ್ಳುತ್ತಿದ್ದ ಪಾದೆಬೆಟ್ಟು ಶರ್ಮ ಕುಟುಂಬಸ್ಥರು ಆ ದೇವಳದ ಪೂಜಾ ಕೈಂಕರ್ಯ ಕಾರಣಾಂತರದಿಂದ ಕೈತಪ್ಪಿದಾಗ ಸ್ಥಾಪಿಸಿದ ದೇವಸ್ಥಾನವಿದು. ಅಂದಿನಿಂದಲೂ ಕುಟುಂಬಸ್ಥರು ಮಾತ್ರವಲ್ಲದೆ ಸಮಾಜ ಬಾಂಧವರು, ಊರವರು, ಭಕ್ತಿಯಿಂದ ಶ್ರೀ ದೇವರ ಸೇವೆಗೈಯುತ್ತಾ ಶಕ್ತ್ಯಾನುಸಾರ ದೇವಳದ ಜೀರ್ಣೋದ್ಧಾರಗೈಯುತ್ತಾ ಬಂದಿದ್ದಾರೆ. ಸುಮಾರು ಐವತ್ತು ವರ್ಷಗಳ ಹಿಂದೆ ಜೀರ್ಣೋದ್ಧಾರ ಕೈಗೊಂಡು ಶ್ರೀ ಎಲ್ಲೂರು ಲಕ್ಷ್ಮೀ ನಾರಾಯಣ ಜ್ಯೋತಿಷ್ಕರ ನೇತೃತ್ವದಲ್ಲಿ ಬ್ರಹ್ಮಕಲಶೋತ್ಸವ ನಡೆಸಿರುವ ಬಗ್ಗೆ ದಾಖಲೆಗಳು ದೇವಸ್ಥಾನದಲ್ಲಿದೆ.

ಪಡುಬಿದ್ರೆಯಿಂದ ಕಾರ್ಕಳಕ್ಕೆ ಹೋಗುವ ದಾರಿಯಲ್ಲಿ ಸುಮಾರು ಒಂದೂವರೆ ಕಿ.ಮೀ. ಕ್ರಮಿಸಿದಾಗ ಎಡಕ್ಕೆ ಶ್ರೀ ದೇವಳಕ್ಕೆ ಹೋಗುವ ದಾರಿಯ ಸೂಚನಾಫಲಕ ಸಿಗುತ್ತದೆ. ಈ ದಾರಿಯಲ್ಲಿ ಒಂದೂವರೆ ಕಿ.ಮೀ. ವನರಾಶಿಯ ಮಧ್ಯೆ ಇರುವ ದಾರಿಯಲ್ಲಿ ಸಾಗಿದಾಗ ಭತ್ತದ ಗದ್ದೆಗಳ ಮಧ್ಯೆ ಕಂಗೊಳಿಸುತ್ತಿರುವ ದೇವಸ್ಥಾನವನ್ನು ಕಾಣಬಹುದು. ದೇವಸ್ಥಾನದಲ್ಲಿ ಭವ್ಯವಾದ ಶ್ರೀ ವಿಷ್ಣುಮೂರ್ತಿಯ ವಿಗ್ರಹದೊಂದಿಗೆ ಉಪದೇವತೆಗಳಾಗಿ ಗಣಪತಿ ಹಾಗೂ ಶಾಸ್ತಾವು ದೇವರುಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ.

ಇತ್ತೀಚೆಗೆ ದೇವಳವನ್ನು ಪಡುಬಿದ್ರೆಯ ಸ್ಥಾನಿಕ ಬ್ರಾಹ್ಮಣ ಸಂಘದ ಸಹಯೋಗದೊಂದಿಗೆ ಸಂಪೂರ್ಣವಾಗಿ ನವೀಕರಿಸಲಾಗಿದೆ. ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳು ದೇವಳದ ತಂತ್ರಿಗಳು. ಶ್ರೀ ದೇವರಾಜ ಶರ್ಮ ದೇವಳದ ಪ್ರಧಾನ ಅರ್ಚಕರು ಹಾಗೂ ಈಗ ಇನ್ನೋರ್ವ ಅರ್ಚಕರನ್ನೂ ನೇಮಕ ಮಾಡಲಾಗಿದೆ. ಶ್ರೀ ಬಿ. ಜಯರಾಮರಾವ್ ಆಡಳಿತ ಮೊಕ್ತೇಸರರಾಗಿದ್ದಾರೆ. ಕಳೆದ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಶ್ರೀ ದೇವರಿಗೆ ಬೆಳ್ಳಿಯ ಕವಚವನ್ನು ಸಮರ್ಪಿಸಿ ರಜತೋತ್ಸವವನ್ನು ಆಚರಿಸಲಾಗಿತ್ತು. ಹಾಗೆಯೇ ಅರ್ಚಕರಿಗಾಗಿ ನಿವಾಸವನ್ನೂ ಕಟ್ಟಲಾಗಿದೆ.

ದೇವಸ್ಥಾನದಲ್ಲಿ ನಿತ್ಯಪೂಜೆ, ಹೂವಿನ ಪೂಜೆ, ರಂಗಪೂಜೆ ಇತ್ಯಾದಿಗಳು ಕಾಲಕಾಲಕ್ಕೆ ಹಾಗೂ ಭಕ್ತರ ಸೇವೆಯಂತೆ ಜರಗುತ್ತಿರುತ್ತದೆ. ನರಸಿಂಹ ಜಯಂತಿಯ ದಿನದಂದು ಪ್ರತಿ ವರ್ಷ ವರ್ಷಾವಧಿ ಉತ್ಸವ ಜರಗುತ್ತದೆ. ಕಳೆದ ವರ್ಷ ದೇವಳದಲ್ಲಿ ಮೇ ತಿಂಗಳಲ್ಲಿ ಹದಿನೈದು ದಿನಗಳ ಕಾಲ ವಟುಗಳಿಗಾಗಿ ವೈದಿಕ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ವರ್ಷವೂ ಮೇ ತಿಂಗಳ ಒಂದನೆ ತಾರೀಖಿನಿಂದ ಹದಿನೈದರ ತನಕ ವೈದಿಕ ಶಿಬಿರವನ್ನು ಏರ್ಪಡಿಸಲಾಗಿದೆ. ನಮ್ಮ ಸಮಾಜದ ವಟುಗಳು ಹಾಗೂ ಆಸಕ್ತರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ. ವಿವರಗಳಿಗಾಗಿ ಸಂಪರ್ಕ ಸಂಖ್ಯೆ9743159540


With Best Compliments from :



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" (ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 9.5% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 10% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2008-09 ರಿಂದ 2014-15ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸೊಸೈಟಿಯ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಆ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ – ☎ 2522408 ಕುಕ್ಕಿಕಟ್ಟೆ ಶಾಖೆ – ☎ 2592133
ಪಡುಬಿದ್ರಿ ಶಾಖೆ – ☎ 2556608 ಕೋಟೇಶ್ವರ ಶಾಖೆ – ☎ 9341854114



*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging

# ಜಗನ್ಮಾನ್ಯರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು

-ಡಾ। ಎಚ್.ವಿ. ನರಸಿಂಹಮೂರ್ತಿ, ಕುಂದಾಪುರ

**ಎಪ್ರಿಲ್ 12ರಂದು ಶೃಂಗೇರಿ ಜಗದ್ಗುರುಗಳ 66ನೇ ವರ್ಧಂತ್ಯುತ್ಸವದ ಸಂದರ್ಭದಲ್ಲಿ ವಿಶೇಷ ಲೇಖನ**





ಶೃಂಗೇರಿ ಶ್ರೀ ಶಾರದಾಪೀಠದ ಅವಿಚ್ಛಿನ್ನಗುರು ಪರಂಪರೆಯ ಮೂವತ್ತಾರನೆಯ ಅಧಿಪತಿಗಳಾಗಿರುವ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಆಶ್ರಮೋಚಿತವಾದ ಸದ್ಗುಣಗಳಿಂದ ಜಗನ್ಮಾನ್ಯರಾಗಿ ಜನಮಾನಸಕ್ಕೆ ಸನಾತನ ಋಷಿಪರಂಪರೆಯ ಆಧ್ಯಾತ್ಮಿಕ ಬೆಳಕನ್ನು ನೀಡುತ್ತಿದ್ದಾರೆ. ವಿಜ್ಞಾನ ಯುಗದ ಶುಷ್ಕಪಠಣ ಮತ್ತು ಸಂಶಯದ ಸುಳಿಯಲ್ಲಿ ಸಿಲುಕಿ, ಜೀವನದ ಗೊತ್ತು-ಗುರಿಗಳನ್ನು ಮರೆತು ಐಹಿಕ-ಪಾರಲೌಕಿಕಗಳೆರಡನ್ನು ನೆನೆಯದೆ, ವ್ಯರ್ಥವಾದ ಯಾಂತ್ರಿಕ ಬದುಕನ್ನು ಸಾಗಿಸುವವರೆಲ್ಲರಿಗೂ ಅವರ ಅನುಗ್ರಹ-ಉಪದೇಶಗಳು ಮಾರ್ಗದರ್ಶಕವಾಗಿವೆ.

**ಬಾಲ್ಯ-ಸಂನ್ಯಾಸದೀಕ್ಷೆ**

ಶ್ರೀ ಭಾರತೀತೀರ್ಥರು ಮೂಲತಃ ಆಂಧ್ರ ಪ್ರದೇಶದ ನರಸರಾವು ಪೇಟೆ ಎಂಬಲ್ಲಿ ವಾಸವಾಗಿದ್ದ ಪ್ರಸಿದ್ಧ ವೈದಿಕ ವಿದ್ವಾಂಸರ ಮನೆತನದವರು. ವೇ.ಬ್ರ.ಶ್ರೀ ತಂಗಿರಾಲ ವೆಂಕಟೇಶ್ವರ ಅವಧಾನಿ ಮತ್ತು ಸೌಭಾಗ್ಯವತಿ ಅನಂತಲಕ್ಷ್ಮಮ್ಮನವರು ಇವರ ಪೂರ್ವಾಶ್ರಮದ ತಂದೆ-ತಾಯಿಗಳು. ಖರ ಸಂವತ್ಸರದ ಚೈತ್ರ ಶುಕ್ಲ ಷಷ್ಠಿ (11 ಏಪ್ರಿಲ್ 1951) ಇವರ ಜನ್ಮದಿನ. ಸೀತಾ ರಾಮಾಂಜನೇಯುಲು ಎಂಬ ನಾಮಾಂಕಿತರಾಗಿದ್ದ ಇವರು ಗರ್ಭಾಶ್ರಮದಲ್ಲಿ ಉಪನೀತರಾಗಿ, ಹತ್ತನೆಯ ವಯಸ್ಸಿಗಾಗಲೇ ಸಂಸ್ಕೃತದಲ್ಲಿ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯ ಪಡೆದಿದ್ದರು. ಶೃಂಗೇರಿಯ ಹಿಂದಿನ ಪೀಠಾಧಿಪತಿ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾ ತೀರ್ಥರು ತಮ್ಮ ವಿಜಯಯಾತ್ರೆಯ ಸಂದರ್ಭದಲ್ಲಿ ನರಸರಾವು ಪೇಟೆಗೆ ಆಗಮಿಸಿದ್ದಾಗ, ತೀವ್ರವಾದ ಆಸಕ್ತಿಯಿಂದ ಅವರ ದರ್ಶನ ಪಡೆದು, ಸಂಸ್ಕೃತದಲ್ಲಿ ಸಂಭಾಷಣೆ, ಅವರ ಪರಿಪೂರ್ಣ ಅನುಗ್ರಹಕ್ಕೆ ಪಾತ್ರರಾದರು.

ಅಂದಿನಿಂದಲೇ ಅಧ್ಯಾತ್ಮನಿಷ್ಠವಾದ ವಿರಕ್ತ ಜೀವನವನ್ನು ನಡೆಸುತ್ತಿದ್ದ ಇವರು ತಮಗೆ ಮಾರ್ಗದರ್ಶನ ನೀಡುವ ಏಕೈಕ ಗುರುಗಳು. ಶ್ರೀಮದಭಿನವ ವಿದ್ಯಾತೀರ್ಥರು ಎಂದು ದೃಢವಾಗಿ ನಂಬಿ, 1966ರಲ್ಲಿ ಉಜ್ಜಯಿನಿಯಲ್ಲಿ ಚಾತುರ್ಮಾಸ್ಯ ಆರಂಭಿಸಿದ್ದ ಗುರುಗಳ ಬಳಿಗೆ ತೆರಳಿ, ಅವರಲ್ಲಿ ಶಾಸ್ತ್ರಾಭ್ಯಾಸ ಆರಂಭಿಸಿದರು. 1968ರಲ್ಲಿ ಗುರುಗಳವರು ಶೃಂಗೇರಿಗೆ ಆಗಮಿಸಿದ ನಂತರ ಗುರುಗಳವರಿಂದ ಮಾತ್ರವಲ್ಲ ಅವರ ಆದೇಶದಂತೆ ಶ್ರೇಷ್ಠ ವಿದ್ವಾಂಸರಾದ ಗೊಲ್ಲಪೂಡಿ ಗೋಪಾಲಕೃಷ್ಣ ಶಾಸ್ತ್ರಿಗಳ ಬಳಿ ತರ್ಕಶಾಸ್ತ್ರ, ಶ್ರೀ ಮಠದ ಇತರ ವಿದ್ವಾಂಸರಿಂದ ವೇದಾಂತ, ಮೀಮಾಂಸ, ವ್ಯಾಕರಣ, ಯಜುರ್ವೇದ-ಮುಂತಾದವನ್ನೆಲ್ಲ ಅಧ್ಯಯನ ಮಾಡಿ, ಗುರುಗಳ ನಿರೀಕ್ಷೆಯ ಮಟ್ಟಕ್ಕೆ ಏರಿದರು. ಅವರ ಗುರುಭಕ್ತಿ, ಆಚಾರನಿಷ್ಠೆ ಸೇವಾಮನೋಭಾವ. ಇತ್ಯಾದಿಗಳನ್ನು ಗಮನಿಸಿದ ಗುರುಗಳವರು ಆನಂದ ಸಂವತ್ಸರದ ಆಶ್ವಯುಜ ಬಹುಳ ದ್ವಾದಶಿಯಂದು (11 ನವೆಂಬರ್ 1974) ಸಂನ್ಯಾಸ ದೀಕ್ಷೆ ನೀಡಿ, ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ, 'ಭಾರತೀತೀರ್ಥ' ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರು.

ವೇದ-ಶಾಸ್ತ್ರಗಳಲ್ಲಿ ಅಪಾರ ವೈದುಷ್ಯ ಹೊಂದಿದ್ದ ತಮ್ಮ ಶಿಷ್ಯ ಭಾರತೀತೀರ್ಥರಿಗೆ ಶ್ರೀ ಮಠದ ಸಂಪ್ರದಾಯ, ಆಶ್ರಮೋಚಿತ ನಿಯಮಗಳು-ಇವನ್ನೆಲ್ಲ ಪರಿಚಯಿಸುತ್ತಾ ಭಾರತದಾದ್ಯಂತ ತಮ್ಮೊಡನೆ ಯಾತ್ರೆ ಮಾಡಿಸಿ, ಸ್ವಲ್ಪ ಕಾಲದ ನಂತರ ಸ್ವತಂತ್ರವಾಗಿ ಯಾತ್ರೆ ಕೈಗೊಳ್ಳಲು ಅವರನ್ನು ಪ್ರೇರೇಪಿಸಿದರು. 1989ರ ಸೆಪ್ಟಂಬರ್ 21ರಂದು ಶ್ರೀ ಅಭಿನವ ವಿದ್ಯಾತೀರ್ಥರು ಮುಕ್ತರಾದ ನಂತರ ಆ ವರ್ಷ-ಅಂದರೆ ಶುಕ್ಲ ಸಂವತ್ಸರದ ಆಶ್ವಯುಜ ಕೃಷ್ಣ ಪಂಚಮಿಯಂದು (19 ಅಕ್ಟೋಬರ್ 1989) ಶ್ರೀ ಭಾರತೀತೀರ್ಥರು ಶೃಂಗೇರಿ ಶ್ರೀ ಶಾರದಾಪೀಠದ ಮೂವ್ವತ್ತಾರನೆಯ ಅಧಿಪತಿಗಳಾಗಿ ಪಟ್ಟಾಭಿಷಿಕ್ತರಾದರು.

**ವೇದ-ಶಾಸ್ತ್ರಗಳ ಸಂರಕ್ಷಕರು**

ತಾವು ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳಲ್ಲಿ ತಮ್ಮ ಸ್ಥಾನವನ್ನು ಅಲಂಕರಿಸುವವರು ಹೇಗಿರಬೇಕೆಂಬುದನ್ನು ಆಚಾರ್ಯ ಶಂಕರರು ತಮ್ಮ 'ಮಹಾನುಶಾಸನ'ದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲಿನ ಈ ಶ್ಲೋಕ ಜಗನ್ಮಾನ್ಯರಾದ ಶ್ರೀ ಭಾರತೀತೀರ್ಥರನ್ನೇ ಕುರಿತಂತೆ ಇದೆ. 'ಶುಚಿರ್ಜಿತೇಂದ್ರಿಯೋ ವೇದವೇದಾಂಗಾದಿ ವಿಶಾರದಃ। ಯೋಗಜ್ಞ ಸರ್ವಶಾಸ್ತ್ರಜ್ಞಃ ಸಮರಾಸ್ಥಾನಮರ್ಹತಿ॥ - 'ನನ್ನ ಸ್ಥಾನವನ್ನು (ಪೀಠಾಧಿಪತ್ಯವನ್ನು) ವಹಿಸಿಕೊಳ್ಳಲು ನಿರ್ಮಲನೂ, ಜಿತೇಂದ್ರಿಯನೂ, ವೇದ-ವೇದಾಂಗಗಳು ಹಾಗೂ ಎಲ್ಲ ಶಾಸ್ತ್ರಗಳನ್ನು ಚೆನ್ನಾಗಿ ಬಲ್ಲವನು ಮಾತ್ರ ಅರ್ಹನಾಗುತ್ತಾನೆ' ಎಂಬುದು ಈ ಶ್ಲೋಕದ ಒಟ್ಟು ತಾತ್ಪರ್ಯ. ಭಗವತ್ಪಾದ ಶಂಕರರು ಹೇಳಿರುವ ಈ ಎಲ್ಲಾ ಅರ್ಹತೆಗಳೂ ಸಂಗಮಿಸಿರುವುದು ಶ್ರೀ ಭಾರತೀತೀರ್ಥರಲ್ಲಿ. ನಿರ್ಮಲರೂ, ಜಿತೇಂದ್ರಿಯರೂ, ಬಾಲ್ಯದಿಂದ ಇಂದಿನವರೆಗೂ ವೇದ-ಶಾಸ್ತ್ರಗಳ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವುಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಗಳಿಸಿದವರೂ ಆದ ಅವರಿಗೆ ಶೃಂಗೇರಿಯ ಪೀಠಾಧಿಪತಿಗಳಿಗಿರುವ 'ಪದವಾಕ್ಯ ಪ್ರಮಾಣ ಪಾರಾವಾರ ಪ್ರವೀಣ' ಎಂಬ ಬಿರುದು ಅನ್ವರ್ಥವಾಗಿದೆ.

(4ನೇ ಪುಟಕ್ಕೆ...)

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ

## ಜಗನ್ಮಾನ್ಯರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು

■...3ನೇ ಪುಟದಿಂದ

ವೇದ ಶಾಸ್ತ್ರಗಳನ್ನು ರಕ್ಷಿಸಿದರೆ ಮಾತ್ರ ಸನಾತನದ ಧರ್ಮದ ಸಂರಕ್ಷಣೆಯಾಗುತ್ತದೆ ಎಂದು ಭಾವಿಸುವ ಅವರು ಶೃಂಗೇರಿ ಶ್ರೀ ಶಾರದಾ ಪೀಠದ ಅನೇಕ ಶಾಖಾಮಠಗಳಲ್ಲಿ ವೇದ-ಶಾಸ್ತ್ರಪಾಠಶಾಲೆಗಳನ್ನು ಸ್ಥಾಪಿಸಿದರು. ಶೃಂಗೇರಿಯ ಸದ್ವಿದ್ಯಾಸಂಜೀವಿನಿ ಪಾಠಶಾಲೆ, ಮಹಾಗಣಪತಿ ವಾಕ್ಯಾರ್ಥವಿದ್ವತ್ಸಭಾ, ಸುರಸರಸ್ವತೀ ಸಭಾ, ಶಾರದಾಧನ್ವಂತರಿ ಆಸ್ಪತ್ರೆ, ಶಂಕರ ಕೃಪಾ, ತತ್ತ್ವಾಲೋಕ ಮೊದಲಾದ ಪತ್ರಿಕೆಗಳು, ಶಂಕರ ಜಯಂತಿ ಆಚರಣೆ-ಇವುಗಳಿಗೆಲ್ಲ ಹೊಸ ಆಯಾಮ ನೀಡಿದರು. ಶ್ರೇಷ್ಠವಿದ್ವಾಂಸರಿಗೆ ಶ್ರೀಶಾರದಾಪೀಠ ಪ್ರಶಸ್ತಿ, ಪ್ರತಿ ತಿಂಗಳು ಸಾವಿರಾರು ಮಂದಿ ವೃಯೋವೃದ್ಧರಾದ ವೇದ-ವಿದ್ವಾಂಸರಿಗೆ ಗೌರವಸಂಭಾವನೆ, ಶ್ರೀ ಶಂಕರ ಅದ್ವೈತ ಶೋಧಕೇಂದ್ರ, ಶ್ರೀ ಶಂಕರ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಕೇಂದ್ರಿಯ ಸಂಸ್ಕೃತ ವಿದ್ಯಾಪೀಠ ಸ್ಥಾಪನೆ, ಗ್ರಂಥ ಪ್ರಕಟಣೆ, ಗೀತಾ ಜ್ಞಾನಯಜ್ಞ, ಶಾಂಕರತತ್ತ್ವ ಪ್ರಸಾರ ಅಭಿಯಾನ, ಲೋಕಕಲ್ಯಾಣಾರ್ಥವಾಗಿ ಅಯುತ ಚಂಡಿ-ಸಹಸ್ರಚಂಡಿ-ಅತಿರುದ್ರ ಮೊದಲಾದ ಯಜ್ಞಯಾಗಗಳು, ಕೋಟಿ ಕುಂಕುಮಾರ್ಚನೆ, ಕೋಟಿಬಿಲ್ವಾರ್ಚನೆ-ಮೊದಲಾದ ಅನೇಕ ಧಾರ್ಮಿಕ ಕಾರ್ಯಕ್ರಮಗಳು-ಇವುಗಳಿಗೆಲ್ಲ ವಹಿಸುವ ಮುತುವರ್ಜಿ ಇವರ ವೇದ-ಶಾಸ್ತ್ರನಿಷ್ಠೆಗೆ ಒಂದು ನಿದರ್ಶನ. ಇಂದಿನ ಅವಶ್ಯಕತೆಗಳನ್ನು ಗಮನಿಸಿರುವ ಶ್ರೀಶ್ರೀಗಳವರು ಶೃಂಗೇರಿಯಿಂದ ನೊಯಿಡಾವರೆಗೆ ಅನೇಕ ಕಡೆ ಶಾಲೆ-ಕಾಲೇಜುಗಳು, ತಂತ್ರಜ್ಞಾನ ಮತ್ತು ವೈದ್ಯಕೀಯ ಸಂಸ್ಥೆಗಳು, ಆಸ್ಪತ್ರೆಗಳು-ಇವುಗಳನ್ನೆಲ್ಲ ಸ್ಥಾಪಿಸಿ, ಪ್ರೋತ್ಸಾಹಿಸುತ್ತಿದ್ದಾರೆ.

**ಮಾನವೀಯತೆಯ ಸಾಕಾರ ಮೂರ್ತಿ**

ಜಗತ್ತಿನಾದ್ಯಂತ ವ್ಯಾಪಿಸಿರುವ ತಮ್ಮ ಶಿಷ್ಯರನ್ನೆಲ್ಲ ಅನುಗ್ರಹಿಸುತ್ತಿರುವ ಜಗದ್ಗುರುಗಳವರು ವೇದ-ಶಾಸ್ತ್ರ ಸಂಪನ್ನರು ಮಾತ್ರವಲ್ಲ, ಶ್ರೇಷ್ಠ ತತ್ತ್ವಜ್ಞಾನಿಗಳು; ತಪೋನುಷ್ಠಾನನಿಷ್ಠರು; ಬಹುಭಾಷಾಕೋವಿದರು; ಉತ್ತಮ ಕವಿಗಳು; ಎಲ್ಲಕ್ಕಿಂತ ಹೆಚ್ಚಾಗಿ ಮಾನವೀಯತೆಯ ಸಾಕಾರ ಮೂರ್ತಿಗಳು. ಆದ್ದರಿಂದ ಅವರ ದರ್ಶನ ಭಾಗ್ಯ ದೊರೆತವರು ತಾವು ಅನುಭವಿಸಿದ ಆನಂದವನ್ನು ವರ್ಣಿಸಲು ಪದಗಳೇ ಸಾಲದೆ ಮೂಕರಾಗುತ್ತಾರೆ. ಏಕೆಂದರೆ ಶ್ರೀಗಳವರು ಮಗುವಿನಷ್ಟು ಮುಗ್ಧರು; ಅಪೂರ್ವವೆನ್ನಬಹುದಾದ ಜ್ಞಾನಶಕ್ತಿ ಮತ್ತು ಸಂವಹನ ಕೌಶಲ ಸಂಪನ್ನರು. ಅತ್ಯಂತ ಶಿಸ್ತುಬದ್ಧವಾದ ದಿನಚರಿ ಮತ್ತು ತಪೋನುಷ್ಠಾನಗಳಿಂದ ಎಲ್ಲರ ಮನಸ್ಸನ್ನು ಸೆಳೆಯುವ ಅವರ ಸ್ಮರಣೆ ಮಾತ್ರದಿಂದಲೇ ಅನಿರ್ವಚನೀಯವಾದ ಆನಂದ ಮತ್ತು ಶಾಂತಿಯನ್ನು ಪಡೆಯಲು ಸಾಧ್ಯ.

ಪ್ರತಿ ನಿತ್ಯ ತಮ್ಮ ದರ್ಶನ ಪಡೆಯಲು ಸಾಲುಗಟ್ಟಿ ಬರುವ ಭಕ್ತಸಮೂಹವನ್ನು ಸಾಂತ್ವನದ ಮಾತುಗಳಿಂದ ಆಶೀರ್ವದಿಸುತ್ತಾರೆ. ರಾಷ್ಟ್ರಪತಿಗಳಿಂದ ಮೊದಲ್ಗೊಂಡು ಬೇರೆ-ಬೇರೆ ರಾಜ್ಯದ ಮುಖ್ಯಮಂತ್ರಿಗಳವರೆಗೆ ಅನೇಕ ಮಂದಿ ರಾಜಕೀಯ ನೇತಾರರು, ಕಲಾವಿದರು, ವಿಜ್ಞಾನಿಗಳು, ವಿದ್ವಾಂಸರು-ಹೀಗೆ ನಾನಾ ಕ್ಷೇತ್ರಗಳಲ್ಲಿ ಪರಿಣಿತರು ಜಗದ್ಗುರುಗಳವರ ದರ್ಶನ ಪಡೆದು ಕೃತಾರ್ಥರಾಗುತ್ತಿದ್ದಾರೆ. ಡೆಹ್ರಾಡೂನ್‌ನಿಂದ ಕೋಟೆಕಾರುವರೆಗೆ, ಈಗಂತೂ ಕಡಲಾಚೆಯ ಅಮೇರಿಕ, ಕೆನಡಾ-ಮುಂತಾದ ಕಡೆ ವ್ಯಾಪಿಸಿರುವ ಶೃಂಗೇರಿ ಶಂಕರ ಮಠಗಳ ನೇತಾರರಿಗೆ, ಶ್ರೀಮಠದ ಪ್ರಾಂತೀಯ ಧರ್ಮಾಧಿಕಾರಿಗಳಿಗೆ ಮತ್ತು ಮಾರ್ಗದರ್ಶನ ಬಯಸಿ ಬಂದ ಇತರರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಸನಾತನ ಧರ್ಮದ ಸಂರಕ್ಷಣೆ ಮತ್ತು ಪ್ರಸಾರ ಕಾರ್ಯಗಳಲ್ಲಿ ಅವರನ್ನು ತೊಡಗಿಸುತ್ತಿದ್ದಾರೆ. ಭಾರತದ ಪ್ರಮುಖ ಭಾಷೆಗಳಲ್ಲಿ ಅವರು ನೀಡುತ್ತಿರುವ ಪ್ರವಚನಗಳು ಹೃದಯಂಗಮವಾಗಿರುತ್ತವೆ. ಅತ್ಯಂತ ಜಟಿಲವಾದ ಆಧ್ಯಾತ್ಮಿಕ ಸಮಸ್ಯೆಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ಹಾಗೆ ಹೇಳುವ ಕಲೆ ಅವರಿಗೆ ಕರಗತವಾಗಿದೆ.

**ಪ್ರತಿಭಾಸಂಪನ್ನ ಕವಿವರೇಣ್ಯರು**

ನವ-ನವೋನ್ಮೇಶಾಲಿನಿಯಾದ ಪ್ರತಿಭೆಯಿಂದ ಸಂಪನ್ನರಾದ ಜಗದ್ಗುರುಗಳವರು ಸರಸವಾದ ಕವಿತೆಗಳನ್ನು ರಚಿಸಿ, ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಕವಿತೆಗಳನ್ನು ರಚಿಸುವ ಸಾಮರ್ಥ್ಯ ಹೊಂದಿದ್ದ ಅವರು, ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ನಂತರ 'ಶ್ರೀಗುರುಧ್ಯಾನಂ', 'ಶ್ರೀ ಶಂಕರ ಭಗವತ್ಪಾದ ಸ್ತುತಿಃ', 'ಶ್ರೀ ಅಭಿನವ ವಿದ್ಯಾತೀರ್ಥ ಅಕ್ಷರ ಮಾಲಾಸ್ತೋತ್ರಂ, 'ಶ್ರೀ ಚಂದ್ರಶೇಖರ ಭಾರತೀ ನವರತ್ನ ಮಾಲಾ ಸ್ತೋತ್ರಂ' -ಮೊದಲಾದ ಕವಿತೆಗಳಲ್ಲಿ ತಮ್ಮ ಕವಿತಾಚಾತುರ್ಯವನ್ನು ಮೆರೆದಿದ್ದಾರೆ. 'ಶ್ರೀ ಶಾರದಾ ಪಂಚರತ್ನಸ್ತುತಿಃ' 'ಚಂದ್ರಮೌಳೀಶ್ವರ ವರ್ಣಮಾಲಾಸ್ತುತಿಃ' ಶ್ರೀ ಮಹಾಗಣಪತಿ ಸೇವಾ ಪದ್ಯಾವಲಿಃ', 'ಶ್ರೀ ಶಾರದಾ ಸ್ವರ್ಣರಥ ಸಮರ್ಪಣ ಪದ್ಯಾವಲಿಃ'-ಇವುಗಳಲ್ಲೆಲ್ಲ ಅವರ ಕವಿತಾ ಪ್ರತಿಭೆ ಸ್ಫುಟವಾಗಿ ಹೊರಹೊಮ್ಮಿದೆ.

ವೀಣಾಪಾಣಿಯಾದ ಶಾರದಾದೇವಿಯ ಆರಾಧಕರಾದ ಜಗದ್ಗುರುಗಳ ಸಂಗೀತ ವೈದುಷ್ಯ ನಮ್ಮ ದೇಶದ ಹೆಸರಾಂತ ಸಂಗೀತ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿದೆ. ಶ್ರೀ ಗಣೇಶ ಗೀತಮ್ (ಸಾವೇರೀರಾಗ-ರೂಪಕತಾಲ) ಶ್ರೀ ರಾಮಗೀತಮ್ (ತೋಡಿರಾಗ-ರೂಪಕತಾಲ), ಶ್ರೀ ಶಾರದಾಂಬಾ ಗೀತಮ್ (ಸಾರಮತೀರಾಗ-ಖಂಡಶ್ಚಾಪತಾಲ), ಶ್ರೀಶಂಕರಾಚಾರ್ಯ ಗೀತಮ್ (ಬಾಗೇಶ್ರೀರಾಗ-ಆದಿತಾಲ), ಶ್ರೀಸುಬ್ರಹ್ಮಣ್ಯೇಶ್ವರ ಗೀತಮ್(ಷಣ್ಮುಖಿ ಪ್ರಿಯರಾಗ-ರೂಪಕತಾಲ)- ಇವೆಲ್ಲ ಜಗದ್ಗುರುಗಳ ರಾಗ-ತಾಲಜ್ಞಾನಕ್ಕೆ ಸಾಕ್ಷಿಗಳಾಗಿ ನಿಲ್ಲುತ್ತವೆ. ಅನೇಕ ಮಂದಿ ಸಂಗೀತ ವಿದ್ವಾಂಸರು ಈ ಕೃತಿಗಳನ್ನು ಸುಶ್ರಾವ್ಯವಾಗಿ ಹಾಡಿ, ಜಗದ್ಗುರುಗಳ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಜಗದ್ಗುರುಗಳ ಯಾವುದೇ ಕವಿತೆಯಲ್ಲಿ ಕಠಿಣವಾದ ವ್ಯಾಕರಣ ಪ್ರಯೋಗವಿಲ್ಲ. ದೂರಾನ್ವಯ ಕ್ಲೇಶವೂ ಇಲ್ಲ. ಸಂಸ್ಕೃತ ಕಾವ್ಯದ ನಿಯಮಗಳೆಲ್ಲವನ್ನೂ ಬಹಳ ಎಚ್ಚರಿಕೆಯಿಂದ ಪಾಲಿಸಿ, ಪ್ರತಿಯೊಂದು ಕವಿತೆಯಲ್ಲೂ ತಮ್ಮ ಸಹಜವಾದ ಪ್ರತಿಭೆಯ ಮುದ್ರೆಯನ್ನೊತ್ತಿದ ಕವಿವರೇಣ್ಯರು ಇವರು.

**ಸಾಧನೆಗಳ ಸಾಲು**

'ಸ್ವಸ್ವರಾಷ್ಟ್ರ ಪ್ರತಿಷ್ಠಿತ್ರೆವ ಸಂಚಾರಃ ಸುವಿಧೀಯತಾಮ್'-ಸ್ವರಾಷ್ಟ್ರದ ಉನ್ನತಿಗಾಗಿ ಸಂಚಾರವನ್ನು ಮಾಡಬೇಕು ಎಂಬ ಶ್ರೀ ಶಂಕರಾಚಾರ್ಯರ ಅನುಶಾಸನದಂತೆ ಶ್ರೀ ಶ್ರೀಗಳವರು ಶೃಂಗೇರಿಯಿಂದ ಕಾಶ್ಮೀರದವರೆಗೆ ಧರ್ಮಯಾತ್ರೆಗಳನ್ನು ಕೈಗೊಂಡಿದ್ದಾರೆ. ಕಾಶಿ, ರಾಮೇಶ್ವರ, ಕೊಲ್ಲೂರು-ಮೊದಲಾದ ಅನೇಕ ಪುಣ್ಯಕ್ಷೇತ್ರಗಳಲ್ಲಿ ಪುನಃಪ್ರತಿಷ್ಠೆ-ಕುಂಭಾಭಿಷೇಕ-ಅನೇಕ ಯಜ್ಞಯಾಗಾದಿಗಳು ನೂತನ ಶಂಕರಮಠಗಳ ಸ್ಥಾಪನೆ-ಮೊದಲಾದ ನೂರಾರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಎರಡು-ಮೂರು ಬಾರಿ ಚತುರಾಮ್ನಾಯ ಪೀಠಾಧಿಪತಿಗಳ ಸಮ್ಮೇಳನ ನಡೆಸಿ, ಇಡೀ ದೇಶಕ್ಕೆ ಧರ್ಮ ಸಂದೇಶ ನೀಡಿದ್ದಾರೆ. ಕರ್ನಾಟಕದ ಎಂಟು ಮಠಗಳ (ಹರಿಹರಪುರ, ಬಾಳೆಕುದ್ರು, ಯಡತೊರೆ, ಹೆಬ್ಬೂರು, ಚಿತ್ರಾಪುರ, ಹಳದೀಪುರ, ಕರ್ಕಿ ಮತ್ತು ಕಟಪಾಡಿ) ತರುಣಯತಿಗಳಿಗೆ ಆ ಮಠಗಳ ಶಿಷ್ಯ ಸಮುದಾಯದ ಪ್ರಾರ್ಥನೆಯಂತೆ ಸೂಕ್ತ ಮಾರ್ಗದರ್ಶನ ನೀಡಿ ಅವರ ಪೀಠಾರೋಹಣ ಸಂದರ್ಭದಲ್ಲಿ ಅನುಗ್ರಹಿಸಿ ಆಶೀರ್ವದಿಸಿದ್ದಾರೆ. ಈ ದೇಶದ ನಾನಾಭಾಗಗಳಲ್ಲಿ ಪ್ರಕೃತಿ ವಿಕೋಪ ಸಂಭವಿಸಿದಾಗ ನೀಡುತ್ತಿರುವ ನೆರವು, ಅಶಕ್ತರು ಮತ್ತು ಅಂಗವಿಕಲರಿಗೆ ಒದಗಿಸುತ್ತಿರುವ ಸಹಾಯಕ ಉಪಕರಣಗಳು, ಶೃಂಗೇರಿಯ ಸುತ್ತಮುತ್ತಲಿನ ನಾಲ್ಕು ತಾಲೂಕುಗಳಲ್ಲಿನ ಶಾಲಾ-ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಭೋಜನ ವ್ಯವಸ್ಥೆ-ಇಂತಹ ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಶ್ರೀಗಳವರು ವಹಿಸುತ್ತಿರುವ ಕಾಳಜಿ ಅನನ್ಯವಾದುದು.

ಶೃಂಗೇರಿಗಂತೂ ಅವರ ಕೊಡುಗೆ ವಿಶಿಷ್ಟವಾದುದು. ಕುಡಿಯುವ ನೀರಿನ ಸೌಕರ್ಯ, ದತ್ತಿ ಗ್ರಾಮ ಮತ್ತು ಸ್ವಚ್ಛ ಗ್ರಾಮ ಯೋಜನೆಗಳು, ವೃದ್ಧಾಶ್ರಮ ನಿರ್ವಹಣೆ, ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಅನೇಕ ಅತಿಥಿ ನಿವಾಸಗಳು, ಸಕಲ ಸೌಕರ್ಯಗಳನ್ನೊಳಗೊಂಡ 'ಭಾರತೀತೀರ್ಥಪ್ರಸಾದ' ಹೆಸರಿನ ಭೋಜನ ಶಾಲೆ, ಆಧುನಿಕ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಿದ ಗುರುನಿವಾಸ, ಶಾಲಾ ಸೌಧ, ಶ್ರೀ ಶಂಕರಾಚಾರ್ಯರ ಮತ್ತು ತೋರಣಗಣಪತಿಯ ಶಿಲಾಮಯ ದೇವಸ್ಥಾನ, 127 ಅಡಿ ಎತ್ತರದ ಕಲ್ಮಾತಕವಾದ ರಾಜಗೋಪುರ-ಹೀಗೆ ಪಟ್ಟಿ ಮಾಡುತ್ತ ಹೋದರೆ ಎಣಿಕೆಗೆ ನಿಲುಕದಷ್ಟು ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಚಟುವಟಿಕೆಗಳು ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ನಡೆದಿವೆ; ನಡೆಯುತ್ತಿವೆ.

ಪರಮೇಷ್ಠಿ ಗುರುಗಳಾದ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರು ಶೃಂಗೇರಿಯಲ್ಲಿ ಸ್ಥಾಪಿಸಿದ ಶ್ರೀ ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆ, ಬೆಂಗಳೂರಿನ ಶಂಕರಮಠ, ಆದಿಶಂಕರರ ಜನ್ಮ ಭೂಮಿಯಾದ ಕಾಲಟಿಯ ಶ್ರೀಶಂಕರಾಚಾರ್ಯ ಮತ್ತು ಶಾರದಾಂಬಾ ದೇವಸ್ಥಾನ-ಇವೆಲ್ಲವುಗಳ ಶತಮಾನೋತ್ಸವ, ಇತ್ತೀಚೆಗಷ್ಟೆ ನಡೆದ ಶ್ರೀಮದೀಯ ಸದ್ವಿದ್ಯಾಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆಯ ಅಮೃತ ಮಹೋತ್ಸವ; 'ಶಂಕರ ಕೃಪಾ'ಪತ್ರಿಕೆಯ ಸುವರ್ಣ ಮಹೋತ್ಸವ-ಇವೆಲ್ಲವನ್ನೂ ವಿಜೃಂಭಣೆಯಿಂದ ಅತ್ಯಂತ ಅರ್ಥಪೂರ್ಣವಾಗಿ ನಡೆಸಿದ ಕೀರ್ತಿ ಪರಮಪೂಜ್ಯ ಜಗದ್ಗುರುಗಳವರಿಗೆ ಸಲ್ಲುತ್ತದೆ.

**ಅತಿದೊಡ್ಡ ಕೊಡುಗೆ**

ಜಗದ್ಗುರು ಮಹಾಸನ್ನಿಧಾನಂಗಳವರಾದ ಶ್ರೀ ಭಾರತೀ ತೀರ್ಥರ ಅತಿ ದೊಡ್ಡ ಕೊಡುಗೆಯೆಂದರೆ ಅವರ ಉತ್ತರಾಧಿಕಾರಿ ಶಿಷ್ಯರಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು. ಅಂದಿನಿಂದ ಇಂದಿನವರೆಗೆ ತಮ್ಮ ಉತ್ತರಾಧಿಕಾರಿ ಶಿಷ್ಯರ ನೇಮಕ ಶೃಂಗೇರಿ ಶ್ರೀ ಶಾರದಾಪೀಠದ ಎಲ್ಲ ಜಗದ್ಗುರುಗಳ ಬಹುದೊಡ್ಡ ಜವಾಬ್ದಾರಿಯ ಕೆಲಸ. ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಎಲ್ಲ ನಿಟ್ಟಿನಿಂದಲೂ ಅತ್ಯಂತ ಸಮರ್ಥರಾದ ಶ್ರೀ ಭಾರತೀ ತೀರ್ಥರನ್ನು ವ್ಯಾಖ್ಯಾನ ಸಿಂಹಾಸನಾಧೀಶ್ವರರನ್ನಾಗಿ ನೇಮಿಸಿ ಕೃತಾರ್ಥರಾಗಿದ್ದರು. ಅವರಂತೆ ಇವರೂ ಸಹ ಈ ಮಹತ್ತರವಾದ ಜವಾಬ್ದಾರಿಯನ್ನು ಅತ್ಯಂತ ಸೂಕ್ತವಾಗಿ ನಿರ್ವಹಿಸಿ ಕೃತಕೃತ್ಯರಾಗಿದ್ದಾರೆ.

2009ರಿಂದ ತಮ್ಮ ಬಳಿ ಶಾಸ್ತ್ರಾಧ್ಯಯನ ನಿರತರಾಗಿದ್ದ ಬ್ರಹ್ಮಚಾರಿ ಕುಪ್ಪ ವೆಂಕಟೇಶಪ್ರಸಾದ ಶರ್ಮರ ಅಧ್ಯಯನ ಶೀಲತೆ, ಗುರುಭಕ್ತಿ, ಪಾಂಡಿತ್ಯ, ಸದಾಚಾರ, ದೈವಭಕ್ತಿ, ಲೌಕಿಕ ವ್ಯವಹಾರದಲ್ಲಿ ಸಂಪೂರ್ಣ ನಿರಾಸಕ್ತಿ, ಪರಮ-ವೈರಾಗ್ಯ ಸ್ವಭಾವ-ಇವೆಲ್ಲ ಇವರ ಗಮನ ಸೆಳೆದುವು. ಒಂದು ದಿನ ಜಗನ್ಮಾತೆ ಶಾರದಾಂಬೆಯ ಬಳಿ ಪ್ರಾರ್ಥನಾ ನಿರತರಾಗಿದ್ದಾಗ ಅವರನ್ನೇ ಉತ್ತರಾಧಿಕಾರಿಯಾಗಿ ನಿಯಮಿಸುವಂತೆ ಪ್ರೇರಣೆಯಾಯಿತು. ಅದರಂತೆ ಶ್ರೀ ಕುಪ್ಪಾವೆಂಕಟೇಶ ಪ್ರಸಾದ ಶರ್ಮರಿಗೆ ಜಯಸಂವತ್ಸರದ ಮಾಘ ಶುದ್ಧ ತದಿಗೆಯಂದು (2015ರ ಜನವರಿ 23) ಶ್ರೀಮಠದ ಪರಂಪರಾಗತ ವಿಧಿ-ವಿಧಾನಗಳಂತೆ ಶಾಸ್ತ್ರೋಕ್ತವಾಗಿ ಸಂನ್ಯಾಸದೀಕ್ಷೆ ನೀಡಿ, 'ವಿಧುಶೇಖರ ಭಾರತೀ' ಎಂದು ಯೋಗಪಟ್ಟ ನೀಡಿ, 'ಇವರು ಶ್ರೀಶಾರದಾಪೀಠದ ಮುವ್ವತ್ತೇಳನೆಯ ಅಧಿಪತಿಗಳಾಗಿ ಬೆಳಗುವರು' ಎಂದು ಘೋಷಿಸಿದರು.

ಹೀಗೆ ವಿದ್ಯಾವಿನಯ ಸಂಪನ್ನರೂ, ರಾಗ-ದ್ವೇಷ ರಹಿತರೂ, ವಿವೇಕಿಗಳು, ವೇದಾಂತ ತತ್ತ್ವಜ್ಞರೂ ಆದ ಮೂವ್ವತ್ತೇಳನೆಯ ಪೀಠಾಧಿಪತಿಗಳಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು, ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಶೃಂಗೇರಿ ಶ್ರೀ ಶಾರದಾಪೀಠಕ್ಕೆ ಮತ್ತು ಜಗತ್ತಿನಾದ್ಯಂತ ವ್ಯಾಪಿಸಿರುವ ಶ್ರೀ ಮಠದ ಶಿಷ್ಯಸ್ತೋಮಕ್ಕೆ ನೀಡಿರುವ ಅತಿದೊಡ್ಡ ಕೊಡುಗೆ.

**ಹರಕೆ-ಹಾರೈಕೆ.**

ಧರ್ಮನಿರಪೇಕ್ಷತೆಯ ಹೆಸರಿನಲ್ಲಿ ಪವಿತ್ರ ಭಾರತದ ಅತ್ಯಮೂಲ್ಯ ಸಂಪತ್ತಾದ ಸನಾತನಧರ್ಮ-ಸಂಸ್ಕೃತಿಗಳನ್ನು ಮೂಲೆಪಾಲಾಗಿಸುತ್ತಿರುವ ಈ ದಿನಗಳಲ್ಲಿ ಜಗನ್ಮಾನ್ಯರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳವರ ಅಸಾಧಾರಣ ಪಾಂಡಿತ್ಯ, ತಪೋಮಹಿಮೆ ಮತ್ತು ನಿಗ್ರಹಾನುಗ್ರಹ ಸಾಮರ್ಥ್ಯಗಳು ಈ ದೇಶಕ್ಕೆ ವಜ್ರಕವಚ; ಅವರ ಆಶೀರ್ವಾದ-ಮಾರ್ಗದರ್ಶನಗಳು ಈ ನೆಲದ ಧರ್ಮ-ಸಂಸ್ಕೃತಿಗಳ ಪುನರುಜ್ಜೀವನಕ್ಕೆ ಅಮೃತ ಸದೃಶ. ಅವರ ತಪೋಮಯ ಜೀವನ ನಮ್ಮನ್ನು ಪವಿತ್ರಗೊಳಿಸಲಿ; ಅವರ ಮಧುರವಾದ ಉಪದೇಶಗಳು ನಮ್ಮ ಭೌತಿಕ ಬದುಕನ್ನು ಸುಖಮಯಗೊಳಿಸಲಿ; ನಮ್ಮ ದೇಶವನ್ನು ಮುನ್ನಡೆಸುವ ಎಲ್ಲ ನೇತಾರರಿಗೂ ಅವರು ಸನ್ಮತಿಯನ್ನು ಅನುಗ್ರಹಿಸಲಿ-ಎಂಬುದು ಅವರ ಅರವತ್ತಾರನೇ ವರ್ಧಂತ್ಯುತ್ಸವದ ಈ ಪರ್ವಕಾಲದಲ್ಲಿ ನಾವೆಲ್ಲ ಸಲ್ಲಿಸುವ ಹರಕೆ; ಹಾರೈಕೆ.

---


## ಹೊಸ ಜೀವಕ್ಕೆ ಸ್ವಾಗತ

-ಅಮೃತಾ ಹೇಮಂತ್



ಮುದಿ ಬೇರಿನ ಮರದಿ ಚಿಗುರಿದೆ ಹೊಸ ಚಿಗುರು
ಹರಿವ ಹಳೆ ತೊರೆಗೆ ಬೆರೆತಿದೆ ಸಿಹಿ ನೀರು
ಹಳೆದಾದ ಮನದಿ ಮೂಡಿದೆ ಹೊಸ ಕನಸು
ಹಿರಿದಾದ ಕುಲದಿ ಮೂಡಿವೆ ಹೊಸ ಹೆಜ್ಜೆಗಳು
ಹೊಸ ಚಿಗುರಿಗೆ, ಸಿಹಿ ನೀರಿಗೆ, ಹೊಸ ಕನಸಿಗೆ, ಹೊಸ ಹೆಜ್ಜೆಗೆ
ಸ್ವಾಗತಕೋರಿದೆ ಈ ಜಗವು

## ಹೊಸ ವರ್ಷಕ್ಕೆ ಶುಭಾಶಯಗಳು

ಮರದ ಮರೆಯಿಂದ ತೇಲಿ ಬಂದಿದೆ ಕೋಗಿಲೆ ರಾಗ
ಹೂದಳಗಳಿಂದ ಸೂಸಿ ಬಂದಿದೆ ಸುಗಂಧ
ಬೀಸಿ ಬರುವ ಗಾಳಿಯಿಂದ ತೇಲಿ ಬಂದಿದೆ ತಂಗಾಳಿ
ಬರುತಿದೆ ಸಂಭ್ರಮವ ಹೊತ್ತು ವಸಂತ ಕಾಲ
ಹೂವಾಗ ತೊಡಗಿದೆ ಮನ, ಹಾಡಾಗ ತೊಡಗಿದೆ ಪದ
ತುಂಬಿ ತುಳಿಕಿದೆ ಹರುಷ, ಇರಲಿ ಹೀಗೆ ಈ ವರುಷ



ಎಮ್. ದೇವಾನಂದ್ ಭಟ್ Cell : 9845644556 9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Krishna Rao Mob. : 9902029048

KISHAN
Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

**ಪುಸ್ತಕ ಪರಿಚಯ**

# ನಂದಳಿಕೆಯ ಹಠಯೋಗಿ – ನಂದಳಿಕೆ ಬಾಲಚಂದ್ರ ರಾವ್

– ವೈ. ಮೋಹನ ರಾವ್

ಕಲೆಗಳಲಿ ಪರಮಕಲೆ ಜೀವನದ ಲಲಿತ ಕಲೆ।
ಕಲಿಸಲದನಳವಲ್ಲ ಬಾಹ್ಯಬೋಧನೆಯಿಂ ॥
ಒಲಿದೊಲಿಸಿಕೊಳುವ ಲೌಕಿಕನಯದ ಸೊಗಸ ನೀಂ ॥
ತಿಳಿವುದೊಳಹದರಿಂದ – ಮಂಕುತಿಮ್ಮ ॥

ಜೀವನದ ಲಲಿತ ಕಲೆಯಲ್ಲಿ ಯಶಸ್ಸನ್ನು ಕಂಡ ಬಾಲಚಂದ್ರ ರಾಯರಿಗೆ ಶುಭಾಶಯಗಳು.

ನಂದಳಿಕೆಗೆ, ಅನ್ಯರಿಗೆ, ಪ್ರೀತಿಗೆ, ಸಂಸ್ಕೃತಿಗೆ ಎಂದೆಲ್ಲ ತನ್ನನ್ನು ಸತತವಾಗಿ ತೇದುಕೊಂಡಿರುವ ನಂದಳಿಕೆ ಬಾಲಚಂದ್ರರಾಯರ ಬಗ್ಗೆ ಹೇಳುವಾಗ ನಾನು ನಂದಳಿಕೆಗೆ ಅಕ್ಕನ ಮನೆಗೆ ಬಾಲ್ಯದಲ್ಲಿ ಹೋಗುತ್ತಿದ್ದುದು ನನಗೆ ನೆನಪು. ಬಾಲಚಂದ್ರರಾಯರು ನನ್ನ ಭಾವ ಶಂಕರ ರಾಯರ ತಮ್ಮ. ಆಗಿನ ಬಾಲಚಂದ್ರ ಈಗಿನ ಬಾಲಚಂದ್ರ ರಾಯರು. ಆಗ ಬಾಲಚಂದ್ರನಿಗೆ ನನ್ನ ಮೇಲೆ ಅಗಾಧ ಪ್ರೀತಿ. ಆ ಪ್ರೀತಿ ಇಂದಿನ ವರೆಗೂ ಬಾಲಚಂದ್ರರಾಯರಿಗೆ ಉಳಿದಿದೆ. ಆಗ ಕ್ರಿಕೆಟ್ ಆಟ ಆಡಿ, ಬಳಿಕ ಬೆಳ್ಮಣ್ಣಿನ ಹೋಟೇಲಿನಲ್ಲಿ ಕಾಫಿ ಕುಡಿದು ಮನೆಗೆ ಹಿಂತಿರುಗುತ್ತಿದ್ದ ಕಾಲ. ಆಗ ನಂದಳಿಕೆ, ನಂದಳಿಕೆ ಮುದ್ದಣ, ನಂದಳಿಕೆ ದೇವಸ್ಥಾನ, ನಂದಳಿಕೆ ಸಿರಿ ಜಾತ್ರೆ, ನಂದಳಿಕೆ ಮಂತ್ರಿಮನೆ ಎಲ್ಲದರ ಪರಿಚಯ ಮಾಡಿದವರು ಬಾಲಚಂದ್ರರಾಯರು. ಆಗಿನ ನಂದಳಿಕೆ ಮತ್ತು ಬಾಲಚಂದ್ರನಲ್ಲಿ ಆದ ಬದಲಾವಣೆಗಳು ಮತ್ತು ಪ್ರಗತಿಯ ಒಂದು ಚಿತ್ರ ಕಥನವೇ ಈ ಕೃತಿ ''ನಂದಳಿಕೆಯ ಹಠಯೋಗಿ ನಂದಳಿಕೆ ಬಾಲಚಂದ್ರ ರಾವ್''. ಈ ಕೃತಿಯ ಲೇಖಕರು ವಿ.ಗ.ನಾಯಕ.

ಬಾಲಚಂದ್ರರಾಯರು ನಂದಳಿಕೆಯವರು. ಮೂಡುಮನೆಯ ಮಂತ್ರಿಮನೆಗೆ ಸೇರಿದವರು. ತಂದೆ ನಂದಳಿಕೆ ಸುಬ್ಬ ರಾವ್, ತಾಯಿ ಗಿರಿಜಮ್ಮ. ಇವರ ವಿದ್ಯಾಭ್ಯಾಸವು ನಂದಳಿಕೆಯ ಮಹಾಲಿಂಗೇಶ್ವರ ಖಾಸಗಿ ಶಾಲೆಯಲ್ಲಿ ಮತ್ತು ಬೆಳ್ಮಣ್ಣಿನ ಸರಕಾರಿ ಪ್ರೌಢಶಾಲೆಯಲ್ಲಿ. ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು. ಆಗಲೇ ''ವಿಶ್ವಭವನ'' ಹೋಟೇಲಿನ ಕಾರ್ಮಿಕ, ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ ಬಾಲಚಂದ್ರರಾಯರ ದ್ವಿಪಾತ್ರ ನಿರ್ವಹಣೆ. ಸುಮಾರು 3 ವರ್ಷಗಳ ಕಾಲ ವೈದ್ಯಕೀಯ ಪ್ರತಿನಿಧಿ ವೃತ್ತಿ. ಮತ್ತೆ ಕರ್ನಾಟಕ ಬ್ಯಾಂಕಿನಲ್ಲಿ ಉದ್ಯೋಗ ಸಿಕ್ಕಿತು. ನಿವೃತ್ತಿಗೆ ಹತ್ತಿರವಾಗುತ್ತಿದ್ದಂತೆ ಬಾಲಚಂದ್ರರಾಯರಿಗೆ ಮಹಾಪ್ರಬಂಧಕರ ಸಹಾಯಕ ಹುದ್ದೆ.


ಪುತ್ತೂರು ಮಾರ್ಪಳ್ಳಿ ಶಿವರಾಮ ರಾವ್–ಪದ್ಮಾವತಿ ರಾವ್ ದಂಪತಿಯ ಮಗಳು ಎಂ.ವಿಜಯಲಕ್ಷ್ಮಿ ಬಾಲಚಂದ್ರರಾಯರ ಸಹ ಧರ್ಮಿಣಿ. ಮಂಗಳೂರು ವಿ.ವಿ.ಕಾಲೇಜಿನ ಗ್ರಂಥಾಲಯದ ವಿಭಾಗದಲ್ಲಿ ಗುಮಾಸ್ತೆ ಹಾಗೂ ಬೆರಳಚ್ಚುಗಾರ್ತಿ. ಬಾಲಚಂದ್ರ ರಾವ್ ದಂಪತಿಗೆ ಒಬ್ಬಳೇ ಮಗಳು–ಸೌಜನ್ಯ. ಬೆಂಜನ ಪದವು ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವೀಧರೆ. ಇದೇ 2015ರಲ್ಲಿ ಬೆಂಗಳೂರಿನ ವಿದೇಶಿ ಕಂಪನಿಯಿಂದ ಕಂಪ್ಯೂಟರ್ ಇಂಜಿನಿಯರ್ ಆಗಿ ಆಯ್ಕೆ.

ಬಾಲಚಂದ್ರರಾಯರ ಪ್ರಯೋಗ–ಪ್ರಯತ್ನಗಳೆಲ್ಲವೂ ನಂದಳಿಕೆಗೋಸ್ಕರವೇ ಇತ್ತು. ಅವರಿಗೆ ನಂದಳಿಕೆ ಎಂಬುದು ದೀಪ–ನಂದಾದೀಪ. ''ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ'', ನಂದಳಿಕೆಗೆ ಡಾಮರು ರಸ್ತೆ, ವಾಹನ ವ್ಯವಸ್ಥೆ, ಆಸ್ಪತ್ರೆ, ಮುದ್ದಣ ಸ್ಮಾರಕ ವನ, ಮುದ್ದಣ ಸ್ಮಾರಕ ಭವನ ಇವೆಲ್ಲವೂ ನಂದಳಿಕೆಯವರ ಕಾರ್ಯವೈಖರಿ ಮತ್ತು ಸಫಲತೆಗೆ ಸಾಕ್ಷಿಗಳು.

ಬಾಲಚಂದ್ರರಾಯರು ಲೇಖನಗಳನ್ನೂ ಬರೆದಿದ್ದಾರೆ. ಕಾಂತಾವರ, ಕನ್ನಡ ಸಂಘಕ್ಕಾಗಿ ''ನಿಷ್ಠುರ ವಿದ್ವಾಂಸ ತೆಕ್ಕುಂಜ ಗೋಪಾಲಕೃಷ್ಣ ಭಟ್'', ದಕ್ಷಿಣ ಕನ್ನಡ ನವೋದಯದ ಕಣ್ವ–ಬೆನಗಲ್ ರಾಮರಾವ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಗಾಗಿ ''ತುಳುನಾಡ್‌ದ ಮಾಮಲ್ಲ ಕವಿ ನಂದೊಳಿಗೆ ಮುದ್ದಣೆ'', ''ಮಹಾಲಿಂಗೇಶ್ವರ ಕ್ಷೇತ್ರ ಪರಿಚಯ'', ''ಮುದ್ದಣನಿಗೆ ನಮನ'' ಇವೆಲ್ಲವೂ ಬಾಲಚಂದ್ರರಾಯರ ಸಾಹಿತ್ಯ ಸಂಕಲನಗಳು. ಇವರ ಸಂಪಾದಿತ ಕೃತಿಗಳು ''ನಂದಳಿಕೆಯ ನಂದಾದೀಪಗಳು'', ''ನಂದಳಿಕೆಯ ನಂದನ'', ''ಮುದ್ದಣನಿಗೆ ನಮನ'', ''ಗುರುನಮನ''. ಶ್ರೀರಾಮಾಶ್ವಮೇಧಂ, ನಂದಳಿಕೆಯ ನಂದನ, ಕುಮಾರ ವಿಜಯ (ಅರ್ಥಸಹಿತ), ನಂದಳಿಕೆಯ ಐ'ಸಿರಿ' ದರ್ಶನ, ಮುಕ್ಕಾಲು ಪದ್ಯಗಳು, ಗುರುನಮನ, ಇವೇ ಮೊದಲಾದವು ಮುದ್ದಣ ಪ್ರಕಾಶನದ ಪ್ರಕಟಣೆಗಳು. ರತ್ನಾವತಿ ಕಲ್ಯಾಣ–ಕುಮಾರ ವಿಜಯ, ರಾಮಪಟ್ಟಾಭಿಷೇಕ ಹಾಗೂ ರಾಮಾಶ್ವಮೇಧದ ಮುದ್ದಣ–ಮನೋರಮೆಯರ ಸಲ್ಲಾಪಗಳು ಧ್ವನಿಸುರುಳಿ ಸಂಯೋಜನೆಗಳು.

ಬಾಲಚಂದ್ರರಾಯರಿಗೆ ಪ್ರಶಸ್ತಿ ಪುರಸ್ಕಾರಗಳು ಅನೇಕ – ಮಣಿಪಾಲ ಜೇಸಿಸ್ 'ಪ್ರತಿಭಾವಂತ ಯುವಕ ಪ್ರಶಸ್ತಿ', ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜೇಸಿಸ್ ರಾಜ್ಯ ಪ್ರಶಸ್ತಿ, ಬೆಳ್ಮಣ್ಣು ಲಯನ್ಸ್ ಕ್ಲಬ್ ಪುರಸ್ಕಾರ, ಕಾಂತಾವರ ಕನ್ನಡ ಸಂಘದ ಅಭಿವಾಧನ, ಮುದ್ದಣ 125:ಸಂಸ್ಮರಣ ಸಮಾರಂಭದಲ್ಲಿ ಸಂಮಾನ, ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಅಮೇರಿಕ ವಿಶ್ವಕನ್ನಡ ಸಮ್ಮೇಳನದಲ್ಲಿ ಸಂಮಾನ ಇತ್ಯಾದಿ ಪ್ರಶಸ್ತಿಗಳ ಸಂಮಾನಗಳ ಸರಣಿ.

ನಂದಳಿಕೆ ಬಾಲಚಂದ್ರರಿಗೆ ಈಗ ಯಾರ ಹಂಗೂ ಇಲ್ಲ. ''ಅವರು ಏನಂದಾರೋ? ಇವರು ಹಾಗೆಂದಾರೋ?' ಯಾವುದೂ ಕಾಡುವುದಿಲ್ಲ. ನಿದ್ದೆ ಕೆಡಿಸುವುದಿಲ್ಲ. ಎಲ್ಲಿಯೇ ಆಗಲೀ, ಎಷ್ಟೇ ಪ್ರಾಮಾಣಿಕವಾಗಿ ಒಪ್ಪಿಸಿಕೊಳ್ಳಲಿ, ಅನ್ನ, ನಿದ್ದೆ, ನೀರು ಬಿಟ್ಟು ಒದ್ದಾಡಲಿ–ಆಕ್ಷೇಪ ಇದ್ದುದೇ, ನಿಂದೆ ಇರುವುದೇ! ಜಗ್ಗುವುದು ಇಲ್ಲದೇ ಇದ್ದೀತೇ? ಅದು ಸಹಜವೇ. ಎಲ್ಲಿ ಗುರುತಿಸಿಕೊಳ್ಳುವಿಕೆ ಇರುತ್ತದೆ.




ಸಾಹಸ ಪ್ರವೃತ್ತಿ ಇರುತ್ತದೆ, ಅದು ಮತ್ಸರಕ್ಕೆ, ಅಸಹನೆಗೆ ಈಡಾಗುತ್ತದೆ. ನೋವು ನುರಿಗಳಿಗೆ ಸಿಕ್ಕಿಕೊಳ್ಳುತ್ತದೆ! ಯಾರು ಏನೂ ಆಗಿರುವುದಿಲ್ಲವೋ ಅಂಥವರು ಯಾರಿಗೂ ಏನೂ ಆಗಿರುವುದಿಲ್ಲ. ಆದುದರಿಂದ ಅಂಥವರನ್ನು ಯಾರೂ ಗಣಿಸುವುದಾಗಲೀ, ಅವಗಣಿಸುವುದಾಗಲೀ ಮಾಡುವುದಿಲ್ಲ. ನಂದಳಿಕೆ ಬಾಲಚಂದ್ರರ ಕಣ್ಮುಂದೆ ಎಲ್ಲ ಸಿಹಿಕಹಿಗಳು ಒಮ್ಮೊಮ್ಮೆ ಹೀಗೇ ಬಂದು ಹಾಗೇ ಹಾದು ಹೋಗುತ್ತವೆ – ''ಕನ್ನಡಂ ಕತ್ತುರಿಯಲ್ತೆ''

ಕಾಂತಾವರ ಜಯರಾಮ ಕಾರಂತ ಕೃತಿಯ ಬೆನ್ನುಡಿಯಲ್ಲಿ ಹೇಳಿರುವಂತೆ, ''ಮುದ್ದಣ ಧ್ಯಾನದ ನಂದಳಿಕೆ ಬಾಲಚಂದ್ರ ರಾಯರನ್ನು ಅಕ್ಷರ ರೂಪದಲ್ಲಿ ಕಡೆದು ನಿಲ್ಲಿಸಿರುವ ವಿ.ಗ.ನಾಯಕರನ್ನು ಮುದ್ದಣಾಭಿಮಾನಿಗಳೆಲ್ಲರೂ ಅಭಿನಂದಿಸಲೇಬೇಕು''.

ಕೃತಿ : **ನಂದಳಿಕೆಯ ಹಠಯೋಗಿ ನಂದಳಿಕೆ ಬಾಲಚಂದ್ರರಾಯರು**, ಲೇಖಕರು : **ವಿ.ಗ.ನಾಯಕ**, ಪ್ರಕಾಶಕರು : **ಆಕೃತಿ ಆಶಯ ಪಬ್ಲಿಕೇಶನ್ಸ್, ಮಂಗಳೂರು**, ಬೆಲೆ : **ರೂ.100/-**

## ಪುಸ್ತಕ ಬಿಡುಗಡೆ ಸಮಾರಂಭ

ತಾ.03–04–2016ರಂದು ಆದಿತ್ಯವಾರ ಸಂಜೆ ಶ್ರೀ ಶಾರದಾ ಮಂಟಪದಲ್ಲಿ ಡಾ। ಡಿ.ಕೃಷ್ಣಮೂರ್ತಿ ಇವರು ರಚಿಸಿದ ''ಶ್ರೀ ಶ್ರೀ ಆದಿಶಂಕರಾಚಾರ್ಯರು ಹಾಗೂ ವಿರಚಿತ ಸ್ತೋತ್ರಗಳಲ್ಲಿ ಸಸ್ಯಗಳ ಸಾಂದರ್ಭಿಕ ಬಳಕೆಗಳು'' ಎಂಬ ವಿಶಿಷ್ಟ ಪುಸ್ತಕದ ಬಿಡುಗಡೆ ನೆರವೇರಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರ ರಾವ್‌ರವರು ವಹಿಸಿದ್ದರು. ಈ ಪುಸ್ತಕದಲ್ಲಿ ಶಂಕರಾಚಾರ್ಯರು ರಚಿಸಿರುವ ಎಲ್ಲಾ ಕೃತಿಗಳಲ್ಲಿ ಹಾಗೂ ಸ್ತುತಿಗಳಲ್ಲಿ ಬರುವ ಸಸ್ಯಗಳ ಹಾಗೂ ಪುಷ್ಪಗಳ ಬಗ್ಗೆ ವಿವರಣೆ ಇದೆ.

ಡಾ। ಕೃಷ್ಣಮೂರ್ತಿಯವರು ಉಡುಪಿಯ ಪ್ರಸಿದ್ಧ ಆಯುರ್ವೇದ ತಜ್ಞರಾಗಿದ್ದು, ವೈದ್ಯಮಂಡಳಿಯ ಸದಸ್ಯರಾಗಿ, ಅಧ್ಯಕ್ಷರಾಗಿದ್ದವರು ಹಾಗೂ ಹಲವಾರು ಆಯುರ್ವೇದ ವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರು ಜ್ಞಾನಭಾರತೀ ಉಡುಪಿಯ ಸದಸ್ಯರು. ಶ್ರೀ ವೈ. ಭುವನೇಂದ್ರ ರಾವ್‌ರವರು ಜ್ಞಾನ ಭಾರತಿಯ ಪ್ರಸ್ತುತ ಅಧ್ಯಕ್ಷರು.

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

ದಿನಾಂಕ : 14–03–2016

### ಪ್ರಕಟಣೆ

ಶ್ರೀ. ಸುಬ್ರಹ್ಮಣ್ಯ ಸಭಾ ಮಂಗಳೂರು 2015–16 ನೇ ಸಾಲಿನಲ್ಲಿ ರೂ. 49.82 ಲಕ್ಷವನ್ನು ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವಾಗಿ ವಿತರಿಸಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ. ಇದರ ವಿವರ ಈ ಕೆಳಗಿನಂತಿವೆ.

| | |
|---|---|
| 88 ಜನ ವಿದ್ಯಾರ್ಥಿಗಳಿಗೆ ಸಾಲ ವಿದ್ಯಾರ್ಥಿ ವೇತನ | ರೂ.35,05,000.00 |
| 86 ಜನ ವಿದ್ಯಾರ್ಥಿಗಳಿಗೆ ಸಾಮಾನ್ಯ ವಿದ್ಯಾರ್ಥಿ ವೇತನ | ರೂ.2,62,500.00 |
| 104 ಜನ ವಿದ್ಯಾರ್ಥಿಗಳಿಗೆ ದಾನಿಯಿಂದ ವಿದ್ಯಾರ್ಥಿಗೆ ಕಾರ್ಯಕ್ರಮದಲ್ಲಿ | ರೂ.1,64,500.00 |
| ಸಾಲ ವಿದ್ಯಾರ್ಥಿ ವೇತನದ ಬಡ್ಡಿಯ ಬಗ್ಗೆ ಸಹಾಯ ಧನ | ರೂ.10,50,000.00 |
| **ಒಟ್ಟು** | **ರೂ.49,82,000.00** |

ಶ್ರೀ ಸಭೆಯ ಸಾಲವಿದ್ಯಾರ್ಥಿ ವೇತನ ನಿಧಿಯು ರೂ. 117.08 ಲಕ್ಷ ತಲುಪಿರುತ್ತದೆ. ಇದರಿಂದ 179 ಜನ ವಿದ್ಯಾರ್ಥಿಗಳಿಗೆ ರೂ. 116.58 ಲಕ್ಷ ಸಾಲ ವಿದ್ಯಾರ್ಥಿವೇತನವನ್ನು ಒದಗಿಸಿರುತ್ತೇವೆ. ನಮ್ಮ ಎಲ್ಲಾ ದಾನಿಗಳಿಗೂ ಹಾಗೂ ಸದಸ್ಯರಿಗೂ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಮುಂದೆಯೂ ಇನ್ನೂ ಹೆಚ್ಚಿನ ಸಹಕಾರವನ್ನು ನಿರೀಕ್ಷಿಸುತ್ತೇವೆ.

**ಶ್ರೀ. ಎಮ್ ಆರ್ ವಾಸುದೇವ**
ಅಧ್ಯಕ್ಷ

**ಶ್ರೀ ಹರ್ಷಕುಮಾರ್ ಕೇದಗೆ**
ಉಪಾಧ್ಯಕ್ಷ

**ಡಾ. ಎ.ಪಿ ಕೃಷ್ಣ**
ಉಪಾಧ್ಯಕ್ಷ ಹಾಗೂ
ಅಧ್ಯಕ್ಷ ವಿದ್ಯಾರ್ಥಿ ವೇತನ ಸಮಿತಿ

**ಶ್ರೀ. ಕರುಣ್‌ರಾವ್ ಬೆಳ್ಳೆ**
ಕಾರ್ಯದರ್ಶಿ

**ಶ್ರೀ. ಬಿ.ಎಸ್. ಅನಿಲ್ ರಾವ್, ಶ್ರೀ. ಚೇತನ್ ಶರ್ಮಾ**
ಜೊತೆ ಕಾರ್ಯದರ್ಶಿಗಳು

**ಶ್ರೀ. ಪಿ ಶ್ರೀಕಾಂತ್ ರಾವ್**
ಕೋಶಾಧಿಕಾರಿ


With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.



ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ವ್ಯಕ್ತಿ ಪರಿಚಯ

## ಏರ್ಮಾಳು ಕುಮಾರಸ್ವಾಮಿ



ಏರ್ಮಾಳಿನ ಭಾಗವತರ ಮನೆ ರಾಮರಾವ್ ಹಾಗೂ ಸೀತಾಲಕ್ಷ್ಮಿ ದಂಪತಿಗಳ ಪುತ್ರನಾದ ಶ್ರೀ ಏರ್ಮಾಳು ಕುಮಾರ ಸ್ವಾಮಿಯವರದು ಎಲೆಮರೆಯ ಪ್ರತಿಭೆ. ಇವರ ಪ್ರಾಯ 67 ವರ್ಷ. ಇವರು ಎಲೆಕ್ಟ್ರಾನಿಕ್‌ನಲ್ಲಿ ಡಿಪ್ಲೋಮಾ ಪದವೀಧರರು. ಕೃಷಿ, ಓದು, ಬರಹ, ಕೆಸರು ಗದ್ದೆ ಓಟ, ಕೈಕುಸ್ತಿ, ಮಣ್ಣಿನ ಕುಸ್ತಿ ಪಂದ್ಯಗಳಲ್ಲಿ ನಿಷ್ಣಾತರು. ಇದೇ ವರ್ಷ ಫೆಬ್ರುವರಿಯಲ್ಲಿ ಶ್ರೀಲಂಕಾದಲ್ಲಿ ನಡೆದ ಹಿರಿಯರ ಮಾಸ್ಟರ್ ಫೆಡರೇಶನ್ 2016ರ ಪಂದ್ಯಾಟದಲ್ಲಿ ಭಾರತವನ್ನು ಪ್ರತಿನಿಧಿಸಿ ಐದು ಕಿ.ಮೀ ಓಟದಲ್ಲಿ ದ್ವಿತೀಯ ಸ್ಥಾನ ಹಾಗೂ ಮುನ್ನೂರು ಮೀ ಹರ್ಡಲ್ಸ್‌ನಲ್ಲಿ ದ್ವಿತೀಯ ಸ್ಥಾನಿಯಾಗಿ ಮೂಡಿ ಬಂದಿರುವುದು ಅವರ ಇತ್ತೀಚಿನ ಸಾಧನೆ. ಹಿರಿಯ ನಾಗರಿಕರಾಗಿ ತಮ್ಮ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿರುವ ಏರ್ಮಾಳು ಕುಮಾರಸ್ವಾಮಿಯವರನ್ನು ಹೃತ್ಪೂರ್ವಕವಾಗಿ ಶ್ರೀ ಶಾರದ ಬಳಗವು ಅಭಿನಂದಿಸುತ್ತದೆ.

## ಡಾ. ವೈ. ರವೀಂದ್ರನಾಥರಾವ್‌ರಿಗೆ ಸನ್ಮಾನ

ತಾ.19-03-2016ರಂದು ಬ್ರಹ್ಮಾವರದ ಎಸ್.ಎಮ್.ಎಸ್. ಕಾಲೇಜಿನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ, ಸೋಶಿಯಾಲಜಿ ವಿಭಾಗದ ಮುಖ್ಯಸ್ಥ ಡಾ.ವೈ. ರವೀಂದ್ರನಾಥ ರಾಯರನ್ನು ಅಭಿಮಾನಿಗಳು ವಿದ್ಯಾರ್ಥಿಗಳು, ಕಾಲೇಜಿನ ಹಳೆ ವಿದ್ಯಾರ್ಥಿಗಳು ಹಾಗೂ ಊರ ನಾಗರಿಕರು ಸೇರಿ ಸನ್ಮಾನಿಸಿದರು. ಶಾಲಾ ಮುಖ್ಯಸ್ಥ ರೆ| ಫಾ| ಲಾರೆನ್ಸ್ ಡೇವಿಡ್ ಕ್ರಾಸ್ತಾ ಹಾಗೂ ಮಂಗಳೂರಿನ ಸೈಂಟ್ ಅಲೋಸಿಯಸ್ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಅಖಿಲ ಭಾರತ ಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರುಗಳ ಸಂಘದ ಉಪಾಧ್ಯಕ್ಷರಾದ ಶ್ರೀ ನೋಬರ್ಟ್ ಲೋಬೋ ಉಪಸ್ಥಿತರಿದ್ದರು. ಡಾ.ವೈ.ರವೀಂದ್ರನಾಥರಾಯರು ಇದೇ ವರ್ಷ ಜುಲೈ ತಿಂಗಳಲ್ಲಿ ಪ್ರಾಂಶುಪಾಲ ಹುದ್ದೆಯಿಂದ ನಿವೃತ್ತರಾಗಲಿದ್ದಾರೆ.

## ಉಡುಪಿಯ ಹಿರಿಯ ನಾಗರಿಕರ ವೇದಿಕೆಗೆ ಪ್ರಶಸ್ತಿ

ಉಡುಪಿಯ ಹಿರಿಯ ನಾಗರಿಕರ ವೇದಿಕೆಯು ಸಕ್ರಿಯವಾಗಿದ್ದು ಅದರ ಉಪಾಧ್ಯಕ್ಷರಾಗಿ ನಮ್ಮ ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್.ರಾವ್ ಹಾಗೂ ಕೋಶಾಧಿಕಾರಿಯಾಗಿ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರರಾವ್‌ರವರು ಸೇವೆ ಸಲ್ಲಿಸುತ್ತಿದ್ದಾರೆ. ಇವರ ಪರಿಶ್ರಮ, ದೂರದೃಷ್ಟಿತ್ವ ಹಾಗೂ ಕಾರ್ಯಚಾತುರ್ಯದ ಫಲವಾಗಿ ಉಡುಪಿಯ ಹಿರಿಯ ನಾಗರಿಕರ ವೇದಿಕೆಗೆ ರಾಷ್ಟ್ರಮಟ್ಟದ ಪ್ರಶಸ್ತಿ ದೊರಕಿರುತ್ತದೆ. ಈ ಪ್ರಶಸ್ತಿಯನ್ನು ಶ್ರೀ ಸಿ.ಎಸ್.ರಾಯರು ಗೋವಾದ ಥೋನಾಪಾವ್ಲಾದಲ್ಲಿ ನಡೆದ ಸಮಾರಂಭದಲ್ಲಿ ಸ್ವೀಕರಿಸಿದರು.

### ಪ್ರತೀಕ್ಷಾ ರಾವ್ ಐ.ಕೆ.



ನಮ್ಮ ಸಂಘದ ಜತೆ ಕಾರ್ಯದರ್ಶಿಯಾದ ಶ್ರೀ ಐ.ಕೆ.ಜಯಚಂದ್ರ ರಾವ್ ಹಾಗೂ ಪದ್ಮಾಕ್ಷಿ ದಂಪತಿಗಳ ಪುತ್ರಿ ಮಣಿಪಾಲದ ಎಂ.ಐ.ಟಿ. ಕಾಲೇಜಿನಲ್ಲಿ 2ನೇ ವರ್ಷದ ಬಿ.ಟೆಕ್ ವಿದ್ಯಾರ್ಥಿನಿ ಪ್ರತೀಕ್ಷಾ ರಾವ್ ಐ.ಕೆ. ಈ ವರ್ಷದ ಸಾಲಿನ ಶಾಸ್ತ್ರೀಯ ಸಂಗೀತ ಸೀನಿಯರ್ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದು ಉತ್ತೀರ್ಣರಾಗಿದ್ದಾಳೆ. ಈಕೆ ಜ್ಯೂನಿಯರ್ ಗ್ರೇಡ್‌ನ್ನು ವಿದುಷಿ ಶರ್ಮಿಳಾ ರಾವ್‌ರಲ್ಲೂ, ಸೀನಿಯರ್ ಗ್ರೇಡ್‌ನ್ನು ವಿದುಷಿ ಮಾಧವಿ ಭಟ್ ಹಾಗೂ ಮಧೂರು ಬಾಲಸುಬ್ರಹ್ಮಣ್ಯಂರಲ್ಲೂ ಹಾಗೂ ಭರತನಾಟ್ಯವನ್ನು ಮಲ್ಲಿಕಾ ಮಂಜುನಾಥ್‌ರವರಲ್ಲೂ ಮತ್ತು ವಿದ್ವತ್ತನ್ನು ವಿದುಷಿ ಲಕ್ಷ್ಮೀಗುರುರಾಜ್‌ರಲ್ಲೂ ಕಲಿಯುತ್ತಿದ್ದಾಳೆ.

## ಶ್ರೀ ಕ್ಷೇತ್ರ ನೆಲ್ಲಿ ತೀರ್ಥ


(ಪ್ರವಾಸ ಲೇಖನ)

ಪಿ.ಯು.ಸಿ ಮೊದಲ ವರ್ಷದ ಪರೀಕ್ಷೆ ಮುಗಿಸಿದ ಮೊಮ್ಮಗಳ ಒತ್ತಾಯಕ್ಕೆ ಮಣಿದು, ಅವಳ ಸ್ನೇಹಿತೆಯರೊಂದಿಗೆ, ತಾ.13-03-2016ರಂದು ಬೆಳಗ್ಗೆ 8 ಗಂಟೆಗೆ 'ಟವೇರಾ' ವಾಹನದಲ್ಲಿ ಉಡುಪಿ ಯಿಂದ ಪ್ರವಾಸ ಹೊರಟೆವು. ಹಿರಿ-ಕಿರಿಯರ ಹತ್ತು ಜನರ ನಮ್ಮ ಗುಂಪು ಮೂಲ್ಕಿ-ಕಿನ್ನಿಗೋಳಿ-ಮೂರು ಕಾವೇರಿಯಿಂದ ಮೂಡುಬಿದ್ರೆ ಮಾರ್ಗ ಹಿಡಿದು ನಿಡ್ಡೋಡಿಗಾಗಿ ಸುಮಾರು 55 ಕಿ.ಮೀ ಪ್ರಯಾಣಗೈದು 9.30 ಗಂಟೆಗೆ ಶ್ರೀ ಕ್ಷೇತ್ರ ನೆಲ್ಲಿತೀರ್ಥ ತಲಪಿದೆವು. ಇಲ್ಲಿಯ ಕ್ಷೇತ್ರ ದೇವರು ಶ್ರೀ ಸೋಮನಾಥೇಶ್ವರ. ಪ್ರತಿಯೊಬ್ಬರಿಗೂ ಅಲ್ಲಿಯ ದೇವಾಲಯಕ್ಕೆ ತಾಗಿ ಇರುವ ಗುಹಾಪ್ರವೇಶಕ್ಕೆ ರೂ.50/-ರಂತೆ ಹಾಗೂ ತೀರ್ಥ ಸ್ನಾನದ ಬಾಬ್ತು ರೂ.10/- ರಂತೆ ಪಾವತಿಸಿ, ಹತ್ತಿರದ ಪುಷ್ಕರಣಿಯಲ್ಲಿ ಸ್ನಾನ ಮಾಡಿ, ಪುರೋಹಿತರ ಮೂಲಕ ಸಂಕಲ್ಪ ಮಾಡಿಸಿಕೊಂಡು, ನಮ್ಮ ಗುಂಪು ಇತರ 7-8 ಮಂದಿಯೊಂದಿಗೆ ಒದ್ದೆ ಬಟ್ಟೆಯಲ್ಲೇ ಪ್ರವೇಶಕ್ಕೆ ಸಿದ್ಧವಾಯ್ತು. ಅರ್ಚಕರೊಬ್ಬರು ಕೈದೀಪ(ದೊಂದಿ) ಹಿಡಿದುಕೊಂಡು ಇನ್ನೊಂದನ್ನು ಮಧ್ಯದಲ್ಲಿದ್ದ ನಮ್ಮ ಪೈಕಿ ಹುಡುಗನಿಗೆ ಕೊಟ್ಟು, "ಹರಹರ ಮಹಾದೇವ್" ಎಂಬ ಘೋಷಣೆಯೊಂದಿಗೆ, ಗುಹಾ ಪ್ರವೇಶ ಮಾಡಿದೆವು. ಒಬ್ಬೊಬ್ಬರೇ ಬಗ್ಗಿಕೊಂಡು, ತೆವಳಿಕೊಂಡು, ಅಂಬೆಗಾಲು ಹಾಕುತ್ತಾ, ತಲೆಗೆ ಸ್ವಲ್ಪ ತಾಗಿಸಿಕೊಂಡವರು ಕಿರಿಚಾಡುತ್ತಾ ಸುಮಾರು 150 ಮೀಟರ್ ದೂರದ ಶಿವಲಿಂಗ ಇರುವ ಜಾಗಕ್ಕೆ ತಲುಪಿದೆವು. ಅಲ್ಲಿ ಸುಮಾರು 50 ಜನ ಎದ್ದು ನಿಲ್ಲುವಷ್ಟು ಜಾಗವಿದ್ದು ಅರ್ಧ ಅಡಿ ಆಳದ ನೀರಿನ ಕೆರೆಯಂತಿದೆ. ಆ ನೀರನ್ನು ಶಿವಲಿಂಗಕ್ಕೆ ಹಾಗೂ ಅವರವರ ತಲೆ ಮೇಲೆ ಪ್ರೋಕ್ಷಿಸುವಂತೆ ಅರ್ಚಕರ ಅಪ್ಪಣೆಯಾಯ್ತು. ಅನಂತರ ಶಿವಲಿಂಗಕ್ಕೆ ಭಕ್ತಿಯಿಂದ ಕೈಮುಗಿದೆವು. ದೊಂದಿಯ ಬೆಳಕಿದ್ದ ಕಾರಣ ಒಬ್ಬರ ಮುಖ ಒಬ್ಬರು ನೋಡುವಂತಾಯಿತು. ಗುಹೆಯೊಳಗೆ ವಾಯು ಸಂಚಾರ ಬಹಳ ಕಡಿಮೆಯಿದ್ದು, ಕೆಲವರು ಉಸಿರಾಟದ ತೊಂದರೆ ಅನುಭವಿಸಿದರು. ಗುಹೆಯ ಮೇಲ್ಭಾಗ ಬಹಳ ವಿಶಾಲವಾದ ಬೆಟ್ಟ ಗುಡ್ಡಗಳಿಂದ ಕೂಡಿದೆ. ಕೆಲವು ಕಡೆ ನೀರಿನ ಹನಿ ಮೇಲಿಂದ ಜಿನುಗಿ ನಮ್ಮ ಮೇಲೆ ಬೀಳುತ್ತಿತ್ತು. ವಿಪರೀತ ಸೆಕೆಯ ಅನುಭವವಾಗಿ ಕೆಲವರು ಧಾರಾಕಾರ ಬೆವರಿಳಿಸಿಕೊಂಡರು. ಸುಮಾರು 5 ಮಿನಿಟು ಶಿವಲಿಂಗದ ಹತ್ತಿರವಿದ್ದು ಹಿಂತಿರುಗಿದೆವು. ಎಡಬದಿಯಲ್ಲಿ ಜಾಬಾಲಿ ಮುನಿಗಳು ತಪಸ್ಸು ಮಾಡಿದ ಗುಹೆಯನ್ನು ಹಾಗೂ ಇನ್ನೊಂದು ಕಟೀಲು ಕ್ಷೇತ್ರಕ್ಕೆ ಸಂಪರ್ಕವಿದ್ದ ಗುಹಾಮಾರ್ಗವನ್ನು ತೋರಿಸುತ್ತಾ ಅರ್ಚಕರು ಗುಹಾದ್ವಾರ ತಲುಪಿಸಿದರು. ಹೊರಗೆ ಬಂದವರೆಲ್ಲಾ ಸರಿಯಾಗಿ ಉಸಿರಾಡುತ್ತಾ ದೇಹವನ್ನು ಬಟ್ಟೆಯಲ್ಲಿ ಒರಸಿಕೊಂಡು ಮುಖ್ಯದೇವಳದ ಒಳಗೆ ಹೋಗಿ ಶ್ರೀ ಸೋಮನಾಥೇಶ್ವರನಿಗೆ ಯಥಾಶಕ್ತಿ ಸೇವೆ ಮಾಡಿಸಿದೆವು. ಪ್ರಸಾದ ಪಡೆದೆವು.

ಗುಹಾದರ್ಶನದ ನಂತರ, ಅಲ್ಲಿ ಸ್ನಾನ ಮಾಡುವ ಕ್ರಮ ಇಲ್ಲವಂತೆ. ಈ ಕ್ಷೇತ್ರದಲ್ಲಿ ಗುಹಾಪ್ರವೇಶವು ಮೇಷ ಸಂಕ್ರಮಣದಿಂದ (ಏಪ್ರಿಲ್); ತುಲಾ ಸಂಕ್ರಮಣ (ಅಕ್ಟೋಬರ್) ತನಕ ನಿರ್ಬಂಧಿಸಲಾಗಿದೆ. ಇಲ್ಲಿ ಮಧ್ಯಾಹ್ನ ಪ್ರಸಾದ ಭೋಜನದ ವ್ಯವಸ್ಥೆಯಿದೆ. ಈ ಹಿಂದೆ, ಈ ಕ್ಷೇತ್ರ ಸಂದರ್ಶಿಸಿದ ಸಂಸದೆ ಶ್ರೀಮತಿ ಶೋಭಾ ಕರಂದ್ಲಾಜೆಯವರು ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ಕೊಡುವ ಭರವಸೆ ಇತ್ತಿದ್ದಾರಂತೆ. ತೀರ್ಥ ಸ್ನಾನದ ಪುಷ್ಕರಣಿಯ ಅಭಿವೃದ್ಧಿ ಅಗತ್ಯಬೇಕಾಗಿದೆ. ಮುಖ್ಯ ರಸ್ತೆಯಿಂದ ಅರ್ಧ ಕಿ.ಮೀ ಒಳರಸ್ತೆಗೆ ಟಾರು ಹಾಕಬೇಕಾಗಿದೆ. (ಈ ಕ್ಷೇತ್ರಕ್ಕೆ ಉಡುಪಿಯಿಂದ ಕಟಪಾಡಿ-ಬೆಳ್ಮಣ್-ಮುಂಡ್ಕೂರು ಮೂರು ಕಾವೇರಿಗಾಗಿಯೂ ಬರಬಹುದು. ಸುಮಾರು 4-5 ಕಿ.ಮೀ ದೂರ ಕಡಿಮೆಯಾಗಬಹುದು). ಹಿಂತಿರುಗಿ ಮುಂದಕ್ಕೆ ಮೂಡುಬಿದ್ರೆ, ಮಂಗಳೂರು ರಸ್ತೆಗೆ ಬಂದು, ಗಂಜಿಮಠ-ಕೈಕಂಬಕ್ಕಾಗಿ ಪ್ರಯಾಣಿಸಿ ಪೊಳಲಿ ಶ್ರೀ ರಾಜರಾಜೇಶ್ವರಿ ಅಮ್ಮನವರ ಸನ್ನಿಧಾನದಲ್ಲಿ ಸೇವಾದಿಗಳನ್ನು ನೆರವೇರಿಸಿ, ಮಧ್ಯಾಹ್ನ ಪ್ರಸಾದ ಭೋಜನ ಸ್ವೀಕರಿಸಿದೆವು. ಸ್ವಲ್ಪ ವಿಶ್ರಾಂತಿ ಪಡೆದು, ಮುಂದಕ್ಕೆ ಕೈಕಂಬ-ಗುರುಪುರ ಮಾರ್ಗದಲ್ಲಿ, ವಾಮಂಜೂರಿಗಾಗಿ ಪಿಲಿಕುಳ ನಿಸರ್ಗಧಾಮದ ಪ್ರಾಣಿ-ಪಕ್ಷಿ-ಉರಗೋದ್ಯಾನದಲ್ಲಿ ವಿಹರಿಸಿ, ಸಂಜೆ ತಿಂಡಿ-ತೀರ್ಥ ಸೇವಿಸಿ ಸರಿಯಾಗಿ 6 ಗಂಟೆಗೆ- ಉಡುಪಿ ಸೇರಿದೆವು. ನಮ್ಮ ಗುಂಪಿನಲ್ಲಿ ನನ್ನನ್ನು ಬಿಟ್ಟು ಬೇರೆಯಾರೂ ಈ ಕ್ಷೇತ್ರ ನೋಡಿರಲಿಲ್ಲ. ಮಕ್ಕಳೆಲ್ಲಾ ಬಹಳ ಸಂತಸಪಟ್ಟರು. ನಾನು ಕೂಡಾ 25ರ ಹರೆಯದಲ್ಲಿ ಒಮ್ಮೆ ನೋಡಿದ್ದು, ಈಗ 75ರ ವೃದ್ಧಾಪ್ಯದಲ್ಲಿ ಗುಹಾಂತರ್ಗತ ಶಿವನ ದರ್ಶನ ಮಾಡಿದ ಭಾಗ್ಯ ಲಭಿಸಿತು. ಇಲ್ಲಿ ನನ್ನ ಊಹೆಗೆ ಮೀರಿದ ಬೆಳವಣಿಗೆ ಕಂಡುಬಂತು. ಬಹಳ ಹಿಂದಿನವರು ಹೇಳುತ್ತಿದ್ದ ಅಲ್ಲಿನ "ನಿಗೂಢತೆ"ಯಾದ ಆರು ದೇವಳಗಳು ಭೂಗರ್ಭದಲ್ಲಿ ಸೇರಿ, ಈಗ ಇರುವ ಏಳನೇ ದೇವಸ್ಥಾನದ ಹತ್ತಿರ ಆ ಬೆಟ್ಟ ಬರುತ್ತಿದೆಯಂತೆ. ಕಲಿಯುಗ ಅಂತ್ಯಕ್ಕೆ ಪ್ರಕೃತಿ ಮಾತೆಯ ಗರ್ಭಕ್ಕೆ ಇದೂ ಸೇರಬಹುದೇ? ಎಂಬ ಜಿಜ್ಞಾಸೆಗೆ ಉತ್ತರ ಶಿವನೇ ಬಲ್ಲ.

-ಜಿ.ಕೆ ಕೊಲ್ಲೆ


ಪ್ರೊ : ಸುಧಾಕರ್ ರಾವ್ ಬೆಳ್ಳೆ



ಶ್ರೀಮೂತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103

ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

ಶುಭಾಶಯಗಳೊಂದಿಗೆ

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

ಯಶಸ್ವೀ ಎಂಟರ್‌ಪ್ರೈಸಸ್

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.

ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

*With Best Complimemts From*

SRI M. SHAILESH RAO
B.E., Civil

Ph : 9448624324

Civil Engineer & Contractor

SRI MALAVIKA ASSOCIATES

KALSANKA-UDUPI ROAD, UDUPI.

Website : shreemaalavikaassociates.com

## ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನಂ
## ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ
## ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ ಶೃಂಗೇರಿ (ಶಾಖೆ: ಉಡುಪಿ ಜಿಲ್ಲೆ)

# ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ

ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು ಹಾಗೂ ಅವರ ಕರಕಮಲ ಸಂಜಾತ ಶ್ರೀ ಶ್ರೀ ವಿಧುಶೇಖರ ಭಾರತೀ ತೀರ್ಥ ಸ್ವಾಮಿಗಳ ಅಪ್ಪಣೆಯಂತೆ ಕರ್ನಾಟಕದಾದ್ಯಂತ ತಾ.06-12-2015ನೇ ಭಾನುವಾರದಿಂದ ಪ್ರಾರಂಭಗೊಂಡ ಈ ಯಜ್ಞವು ಉಡುಪಿ ಜಿಲ್ಲೆಯಲ್ಲಿ ಸುಮಾರು 40 ಕೇಂದ್ರಗಳಲ್ಲಿ ನಡೆಯುತ್ತಿದೆ. **ಉಡುಪಿ ಜಿಲ್ಲೆಯ ಶತನಾಮ ಪಾರಾಯಣ ಯಜ್ಞದ ಸಮಾರೋಪದ ಅಂಗವಾಗಿ ತಾ.01-05-2016ನೇ ಆದಿತ್ಯವಾರ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ ಅಖಂಡ ಪಾರಾಯಣ ಶ್ರೀಶಾರದಾ ದೇವಸ್ಥಾನದಲ್ಲಿ ಜರಗಲಿದೆ.** ಈ ಕಾರ್ಯಕ್ರಮದಲ್ಲಿ ಶ್ರೀ ಶಂಕರ ತತ್ತ್ವ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕೃತಾರ್ಥರಾಗಬೇಕಾಗಿ ಕೋರಲಾಗಿದೆ.

**ಶ್ರೀ ಪ್ರಫುಲ್ಲಚಂದ್ರ ರಾವ್**, ಜಿಲ್ಲಾ ಸಂಚಾಲಕರು
(ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನಂ)

---

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬೆಳ್ತಂಗಡಿ

ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠಾಧೀಶ್ವರರಾದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಮತ್ತು ಶ್ರೀಕರಕಮಲ ಸಂಜಾತ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ನಮ್ಮ ಬೇಡಿಕೆಯನ್ನು ಮನ್ನಿಸಿ ದಿನಾಂಕ 20.04.2016ನೇ ಬುಧವಾರದಂದು ಸಂಜೆ 5.00 ಗಂಟೆಗೆ ಬೆಳ್ತಂಗಡಿ ತಾಲೂಕು ಲ್ಯಾಲ ಗ್ರಾಮದ ಸುಬ್ರಹ್ಮಣ್ಯ ನಗರದಲ್ಲಿರುವ **ಸುಬ್ರಹ್ಮಣ್ಯ ಸಭಾ ಭವನವನ್ನು** ಲೋಕಾರ್ಪಣೆಗೊಳಿಸಿ ಅನುಗ್ರಹಿಸಲಿರುವರು.

ಆದುದರಿಂದ ದಿನಾಂಕ 20.04.2016ರಂದು ಎಲ್ಲಾ ಸಮಾಜಬಾಂಧವರು ಹಾಗೂ ಎಲ್ಲಾ ಸಂಘಗಳ ಸದಸ್ಯರು, ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಚಂದಗಾಣಿಸಿಕೊಡಬೇಕಾಗಿ ವಿನಂತಿ.

ದಿನಾಂಕ : 29.03.2016 — **ಶ್ರೀಪತಿ ರಾವ್, ಕಾರ್ಯದರ್ಶಿ**
ಸ್ಥಳ : ಬೆಳ್ತಂಗಡಿ — ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ
ಮೊ. ಸಂಖ್ಯೆ : 9481180184

---

# ಶ್ರೀ ಶಂಕರ ಜಯಂತಿ : ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ

ಕುಂದಾಪುರ: ಇಲ್ಲಿನ ಶ್ರೀ ಕುಂದೇಶ್ವರ ದೇವಸ್ಥಾನ ಮತ್ತು ಕುಂದಾಪುರ ತಾಲೂಕು ಬ್ರಾಹ್ಮಣ ಪರಿಷತ್ತಿನ ಕುಂದಾಪುರ ವಲಯದ ಸಹಭಾಗಿತ್ವದೊಂದಿಗೆ ನಡೆಯುವ ಶ್ರೀ ಶಂಕರ ಜಯಂತಿ ಉತ್ಸವದ ಅಂಗವಾಗಿ ಸಾರ್ವಜನಿಕ ನೆಲೆಯಲ್ಲಿ **''ರಾಷ್ಟ್ರೀಯ ಭಾವೈಕ್ಯದಲ್ಲಿ ಆದಿಶಂಕರರ ಪಾತ್ರ''** ಕುರಿತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಆಸಕ್ತರು ಫುಲ್ ಸ್ಕೇಪ್ ಕಾಗದದಲ್ಲಿ ಹತ್ತು ಪುಟಗಳಿಗೆ ಮೀರದಂತೆ ಕನ್ನಡದಲ್ಲಿ ಪ್ರಬಂಧವೊಂದನ್ನು ಬರೆದು **ಏಪ್ರಿಲ್ 25ರ** ಒಳಗೆ ತಲುಪುವಂತೆ **''ಆಡಳಿತಾಧಿಕಾರಿಗಳು, ಶ್ರೀ ಕುಂದೇಶ್ವರ ದೇವಸ್ಥಾನ, ಕುಂದಾಪುರ-576201, ಉಡುಪಿ ಜಿಲ್ಲೆ''**- ಇವರಿಗೆ ಅಂಚೆ ಮೂಲಕ ತಲುಪಿಸಬೇಕು.

ಸ್ಪರ್ಧಾ ವಿಜೇತರಿಗೆ ತತ್ತ್ವಜ್ಞಾನಿಗಳ ದಿನಾಚರಣೆಯ ಧಾರ್ಮಿಕ ಸಭೆಯಲ್ಲಿ ಅನುಕ್ರಮವಾಗಿ ಮೂರು ನಗದು ಮತ್ತು ಇತರ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

---

# ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಪಾವಂಜೆ-574146, ದ.ಕ.
## ಮಹಾರಥೋತ್ಸವದ ಆಮಂತ್ರಣ

ಭಕ್ತಾಭಿಮಾನಿಗಳೇ

ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಪಾವಂಜೆಯಲ್ಲಿ ದಿನಾಂಕ 12-04-2016ನೇ ಮಂಗಳವಾರದಿಂದ ದಿನಾಂಕ 18-04-2016ನೇ ಸೋಮವಾರದ ವರೆಗೆ ಮಹಾರಥೋತ್ಸವದ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ಜರಗಲಿವೆ. ದಿನಾಂಕ 17-04-2016ನೇ ಭಾನುವಾರ ರಥೋತ್ಸವ ಮತ್ತು ಮಹಾ ಅನ್ನಸಂತರ್ಪಣೆ ನಡೆಯಲಿದೆ. ಈ ಮಹೋತ್ಸವಕ್ಕೆ ತಾವೆಲ್ಲರೂ ಬಂದು ಉತ್ಸವಾದಿಗಳಲ್ಲಿ ಭಾಗವಹಿಸಿ, ಶ್ರೀಮುಡಿ ಗಂಧ-ಪ್ರಸಾದಾದಿಗಳನ್ನು ಸ್ವೀಕರಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**-ದೇವಸ್ಥಾನದ ಆಡಳಿತ ಮಂಡಳಿ**

---

# ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

---

॥ ಶ್ರೀ ವಿಷ್ಣುಮೂರ್ತಿ ಪ್ರಸನ್ನಃ ॥ ॥ ಶ್ರೀ ಮಹಾಗಣಪತಿ ಪ್ರಸನ್ನಃ ॥
॥ ಶ್ರೀ ಶಾಸ್ತವು ಪ್ರಸನ್ನಃ ॥

ಸಮಾಜ ಬಾಂಧವರೇ,

**ಶ್ರೀ ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿ ಹಾಗೂ ಶ್ರೀ ಶ್ರೀ ವಿಧುಶೇಖರ ಭಾರತೀ ತೀರ್ಥ ಸ್ವಾಮಿಗಳ ಪರಮಾಶೀರ್ವಾದದಿಂದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ**

# 'ವೈದಿಕ ಶಿಬಿರ'ವು

ತಾ.01-05-2016ರ ಭಾನುವಾರ ಬೆಳಿಗ್ಗೆ 12-00 ಗಂಟೆಗೆ ಉದ್ಘಾಟನೆಗೊಂಡು ತಾರೀಕು 15-05-2016ರ ಭಾನುವಾರದ ವರೆಗೆ ನಡೆಯಲಿರುವುದು. ಈ ವೈದಿಕ ಶಿಬಿರದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ.

ಇದರ ಪ್ರಾಯೋಜಕತ್ವವನ್ನು ಬೆಂಬಲಿಸುವವರು
- **ಎಬಿಸಿಡಿ ಆಂಡ್ ಇ ಟ್ರಸ್ಟ್ ಇನ್ನ.**
- **ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಚಾರಿಟೇಬಲ್ ಟ್ರಸ್ಟ್ ಕುಕ್ಕಿಕಟ್ಟೆ**
- **ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ.**
- **ಆಡಳಿತ ಮಂಡಳಿ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು**

ಸೂಚನೆ :
1) ಭಾಗವಹಿಸುವ ವಟುಗಳಿಗೆ ವಯೋಮಿತಿ ಇರುವುದಿಲ್ಲ.
2) ವಟುಗಳು ಬರುವಾಗ ಕೌಳಿಗೆ ಸೌಟು, ಹರಿವಾಣ, ದಿನನಿತ್ಯದ ಉಪಯೋಗದ ಬಟ್ಟೆಗಳನ್ನು ತರಬೇಕು.
3) ವಟುಗಳಿಗೆ ಉಳಿದುಕೊಳ್ಳುವ ವ್ಯವಸ್ಥೆ, ತಿಂಡಿ, ಊಟೋಪಚಾರದ ವ್ಯವಸ್ಥೆ ಹಾಗೂ ವೈದ್ಯಕೀಯ ವ್ಯವಸ್ಥೆಯು ಇರುತ್ತದೆ.
4) ಸಮಾಜ ಬಾಂಧವರಿಗೆ ಶ್ರೀ ಕ್ಷೇತ್ರದಲ್ಲಿ ಬ್ರಹ್ಮಚಾರಿ ಆರಾಧನೆ ನಡೆಸುವರೆ, ಈ ದಿನಗಳಲ್ಲಿ ವ್ಯವಸ್ಥೆ ಇರುತ್ತದೆ.
5) ಈ ಕಾರ್ಯಕ್ರಮಕ್ಕೆ ಸಮಾಜ ಬಾಂಧವರ ಸಹಕಾರ ಬಯಸುತ್ತೇವೆ.

**ಸಂಪರ್ಕಿಸಿ : ಎಂ.ಕೆ.ದಿವಾಕರ ರಾವ್-9902169119, ಕೃಷ್ಣರಾಜ ಭಟ್-9980195355, ಜಯರಾಮರಾವ್-9743159540, ಡಾ| ವೈ. ಸುದರ್ಶನ ರಾವ್-9845136322, ಸುಧಾಕರ ಬೆಳ್ಳೆ-9845193103, ಲಕ್ಷ್ಮೀಕಾಂತ ರಾವ್-9448156413**

---

# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ
## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | | |
|---|---|---|
| ಮಂಗಳಾರತಿ | : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ | : | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ | : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : | ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.25-04-2016) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.27-04-2016 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.27-04-2016 ಮತ್ತು ತಾ.11-05-2016 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

---


**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan — YOUR GUIDE TO THE FINANCIAL JUNGLE

Visit : www.sharekhan.com


---

ಶುಭಾಶಯಗಳೊಂದಿಗೆ

# ಹೆಬ್ಬಾರ್ ಎಂಟರ್‌ಪ್ರೈಸಸ್

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.**

**ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.**

ಪ್ರೊ : ಮಂಜುನಾಥ ಹೆಬ್ಬಾರ್ — ಸಂಪರ್ಕ ಸಂಖ್ಯೆ 9611099894

## ಶ್ರೀ ಶಾರದಾ ಮಂಟಪದಲ್ಲಿ ವಾತಾನುಕೂಲ ಯಂತ್ರದ ಅಳವಡಿಕೆ

ಶ್ರೀ ಶಾರದಾ ಮಂಟಪವು ಮದುವೆ ಇತ್ಯಾದಿ ಸಮಾರಂಭಗಳಿಗೆ ಉಡುಪಿಯಲ್ಲಿ ಅತ್ಯುತ್ತಮ ಹಾಲ್ ಆಗಿದ್ದು ಮಿತದರ, ಉತ್ತಮ ಸೌಲಭ್ಯ, ಸ್ವಚ್ಛತೆಗಳಿಂದ ಹೆಸರುವಾಸಿಯಾಗಿದೆ. ತಮ್ಮ ಗ್ರಾಹಕರಿಗೆ ಇನ್ನೂ ಉತ್ತಮ ಸೌಲಭ್ಯವನ್ನು ನೀಡುವ ಸಲುವಾಗಿ ವೇದಿಕೆಯ ಇಕ್ಕೆಲಗಳಲ್ಲಿರುವ ಮದುಮಗ ಹಾಗೂ ಮದುಮಗಳನ್ನು ಶೃಂಗರಿಸುವ ಕೋಣೆಗಳಿಗೆ ವಾತಾನುಕೂಲ ಯಂತ್ರ (ಏರ್‌ಕಂಡೀಶನರ್)ವನ್ನು ಅಳವಡಿಸಲಾಗಿದೆ. ಇದಕ್ಕೆ ಮಿತದರವನ್ನು ನಿಗದಿಪಡಿಸಿದ್ದು ಈ ಸೌಲಭ್ಯವನ್ನು ಗ್ರಾಹಕರು ಇಚ್ಛಿಸಿದಲ್ಲಿ ಮಾತ್ರಾ ಪಡೆದುಕೊಳ್ಳಬಹುದಾಗಿದೆ. ಸಮಾಜ ಬಾಂಧವರು ಈ ಸೌಕರ್ಯದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಆಡಳಿತ ಮಂಡಳಿಯು ಪ್ರಕಟಣೆಯಲ್ಲಿ ತಿಳಿಸಿದೆ.

## ಸಮಾಲೋಚನಾ ಸಭೆ

ಜೀರ್ಣೋದ್ಧಾರಗೊಳ್ಳುತ್ತಿರುವ ಬಳ್ಪ ಶ್ರೀ ತ್ರಿಶೂಲಿನೀ ದೇವಸ್ಥಾನದಲ್ಲಿ ಶ್ರೀ ದೇವರಿಗೆ 2017ನೇ ಇಸವಿಯಲ್ಲಿ "ಪುನಃ ಪ್ರತಿಷ್ಠಾ ಕುಂಭಾಭಿಷೇಕ"ವನ್ನು ಜರಗಿಸಲು ಧಾರ್ಮಿಕ ಉತ್ಸವ ಸಮಿತಿ ಹಾಗೂ ಆಡಳಿತ ಸಮಿತಿ ಹಾಗೂ ಜೀರ್ಣೋದ್ಧಾರ ಸಮಿತಿ ಹಾಗೂ ಗ್ರಾಮಸ್ಥರ ಜೊತೆಗೂಡಿಕೆಯಲ್ಲಿ ತಾ.20-03-2016ರಂದು ಶ್ರೀ ಭಾರತೀತೀರ್ಥ ಸಭಾಭವನದಲ್ಲಿ ಸಮಾಲೋಚನಾ ಸಭೆಯು ನೆರವೇರಿತು.

## ಸಹಪಂಕ್ತಿ ಸಹಭೋಜನ-ಶ್ರೀ ಕೃಷ್ಣ ದೇವಸ್ಥಾನದಲ್ಲಿ



ತಾ.13-03-2016ರ ರವಿವಾರ ಶ್ರೀ ಕೃಷ್ಣ ದೇವಸ್ಥಾನ, ಉಡುಪಿಯಲ್ಲಿ ಪರ್ಯಾಯ ಶ್ರೀ ಶ್ರೀಗಳಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಪರ್ಯಾಯ ಕಾರ್ಯಕ್ರಮಗಳಿಗೆ ಸಹಕಾರವಿತ್ತ ಸರ್ವ ವಿಪ್ರ ಬಾಂಧವರಿಗೆ ಅಭಿನಂದನೆ ಸಲ್ಲಿಸಲು ಉಡುಪಿಯ ಎಲ್ಲಾ ವಿಪ್ರ ಸಂಘಗಳನ್ನು ದರ್ಬಾರಿಗೆ ಅಹ್ವಾನಿಸಿದ್ದರು. ಅಂತೆಯೇ ನಮ್ಮ ಸಂಘಕ್ಕೂ (ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ) ಆಮಂತ್ರಣವಿತ್ತಿದ್ದರು. ಅಂತೆಯೇ ಸಂಘದ ಸುಮಾರು ಮೂವತ್ತುಜನ ಸದಸ್ಯರು ಶ್ರೀ ಶ್ರೀಗಳವರ ಆಶೀರ್ವಾದ ಪಡೆಯಲು ತೆರಳಿದ್ದರು. ಶ್ರೀ ಶ್ರೀ ಗಳು ಸಂಘದ ಸದಸ್ಯರೂ ಸೇರಿದಂತೆ ಸುಮಾರು ಮುನ್ನೂರುಜನ ವಿವಿಧ ಪಂಗಡಗಳಿಗೆ ಸೇರಿದ ವಿಪ್ರರನ್ನು ಉದ್ದೇಶಿಸಿ ಆಶೀರ್ವಚನ ನೀಡಿದರು. ಬ್ರಾಹ್ಮಣ ಸಮಾಜದಿಂದಲೇ ಹಿಂದೂ ಸಮಾಜ ಉಳಿವು ಹಾಗೂ ಬೆಳವಣಿಗೆ ಸಾಧ್ಯ ಎಂದು ಅವರು ನುಡಿದರು. ಆ ಕಾರ್ಯಕ್ರಮದಲ್ಲಿ ನಮ್ಮ ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್‌ರಾಯರು ವಿಪ್ರ ಬಾಂಧವರು ಒಗ್ಗೂಡಬೇಕಾದ ಅವಶ್ಯಕತೆಯನ್ನು ಸಮಸ್ತ ವಿಪ್ರಬಾಂಧವರಿಗೆ ವಿವರಿಸಿದರು. ಕಾರ್ಯಕ್ರಮದ ನಂತರ ಎಲ್ಲರೂ ಮಠದ ಚೌಕಿಯಲ್ಲಿ ಸಹಪಂಕ್ತಿಯಲ್ಲಿ ಭೋಜನವನ್ನು ಸ್ವೀಕರಿಸಿದರು.

### ಮೇಷ ಮಾಸದ ವಿಶೇಷ ದಿನಗಳು

| | |
|---|---|
| 13-04-2016 | ಮೇಷ ಸಂಕ್ರಮಣ |
| 14-04-2016 | ಸೌರಯುಗಾದಿ |
| 17-04-2016 | ಸರ್ವೈಕಾದಶಿ |
| 23-04-2016 | ಚೈತ್ರ ಮಾಸ ಕೃಷ್ಣಪಕ್ಷಾರಂಭ |
| 25-04-2016 | ಸಂಕಷ್ಟಹರ ಚತುರ್ಥಿ |
| 28-04-2016 | ಭರಣಿ ಮಹಾನಕ್ಷತ್ರಾರಂಭ |
| 03-05-2016 | ಸರ್ವೈಕಾದಶಿ |
| 07-05-2016 | ವೈಶಾಖಮಾಸ ಶುಕ್ಲಪಕ್ಷಾರಂಭ |
| 09-05-2016 | ಅಕ್ಷಯ ತೃತೀಯ |
| 10-05-2016 | ಕೃತ್ತಿಕಾ ಮಹಾನಕ್ಷತ್ರಾರಂಭ |
| 11-05-2016 | ಶ್ರೀಶಂಕರ ಜಯಂತಿ |
| 14-05-2016 | ವೃಷಭ ಸಂಕ್ರಮಣ |
| 17-05-2016 | ಸರ್ವೈಕಾದಶಿ |

### ಶುಭ ಜನನ

ಬೆಂಗಳೂರಿನ ಶ್ರೀ ವೈ. ಚಿತ್ತರಂಜನರಾವ್ ಹಾಗೂ ಭಾನುಪ್ರಿಯ ದಂಪತಿಗಳಿಗೆ ತಾ.15-03-2016ರಂದು ಗಂಡು ಮಗುವಿನ ಜನನ ವಾಗಿರುತ್ತದೆ.

**** ****

ಬೆಂಗಳೂರಿನ ಶ್ರೀ ಮಹೇಶ ಭಾತ್ರ ಹಾಗೂ ಪಾದೆಬೆಟ್ಟು ಶಂಕರರಾಯರ ಪುತ್ರಿ ಪುಷ್ಪಲತಾ ದಂಪತಿಗಳಿಗೆ ತಾ.28-03-2016 ರಂದು ಅವಳಿ ಹೆಣ್ಣು ಶಿಶುಗಳ ಜನನವಾಗಿರುತ್ತದೆ.

### ನಾಮಕರಣ

ತಾ.03-04-2016ರಂದು ಬೆಂಗಳೂರಿನ ಶ್ರೀಮತಿ ಶಿಲ್ಪ ಹಾಗೂ ವಿನಯ ದಂಪತಿಗಳು ತಮ್ಮ ಪುತ್ರ ಧನ್ವಿಳ ನಾಮಕರಣವನ್ನು ಪಡುಬಿದ್ರೆಯ ಶ್ರೀ ಬಾಲಗಣಪತಿ ದೇವಸ್ಥಾನದಲ್ಲಿ ನೆರವೇರಿಸಿದರು.

### ಬ್ರಹ್ಮೋಪದೇಶ

**ಚಿ| ಸಿದ್ಧಾರ್ಥ**

ಮುಂಬಯಿ ದೊಂಬಿವಿಲಿಯ ಶ್ರೀ ಗುರುರಾಜರಾವ್ ಹಾಗೂ ಶ್ರೀಮತಿ ಸುಷ್ಮಾ ದಂಪತಿಗಳು ತಮ್ಮ ಪುತ್ರ ಚಿ| ಸಿದ್ಧಾರ್ಥನ ಬ್ರಹ್ಮೋಪದೇಶವನ್ನು ತಾ.31-01-2016 ರಂದು ನೆರುಲ್‌ನ ಆಶ್ರಯ್ ಹಾಲ್‌ನಲ್ಲಿ ನೆರವೇರಿಸಿದರು.


### ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧಿ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್- 9886629697, 9986119865


## ಅರ್ಚನೆ-ಪಾರಾಯಣ-ಗಾನ-ಸನ್ಮಾನ

ಕರ್ವಾಲು ಅನಂತ ಪಟ್ಟಾಭಿ ರಾವ್-ಇವರ ಕರ್ವಾಲು ಅನಂತ ಪದ್ಮನಾಭ ನಿಲಯದಲ್ಲಿ ದಿನಾಂಕ 27-03-2016ನೇ ಆದಿತ್ಯವಾರ ಬೆಳಿಗ್ಗೆ ಗಣಹೋಮ, ಮಧ್ಯಾಹ್ನ ಸತ್ಯನಾರಾಯಣ ಪೂಜೆ ಹಾಗೂ ರಾತ್ರಿ ದುರ್ಗಾ ನಮಸ್ಕಾರ ಪೂಜೆಯನ್ನು ಬ್ರಹ್ಮಶ್ರೀ ಗುರುಪ್ರಸಾದ್ ಹೆಬ್ಬಾರ್ ಕಬ್ಬಿನಾಲೆ ಇವರ ನೇತೃತ್ವದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಅದೇ ದಿನ ಮಧ್ಯಾಹ್ನ ಶ್ರೀ ಶಂಕರ ಪ್ರತಿಷ್ಠಾನ (ರಿ) ಕಾರ್ಕಳ. ಇದರ ವತಿಯಿಂದ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ವಿಷ್ಣು ಸಹಸ್ರನಾಮ ಪಾರಾಯಣ ಜರಗಿತು. ಶ್ರೀಮತಿ ಚೈತ್ರಾ ಅಶ್ವಿನ್ ಕುಮಾರ್‌ರವರಿಂದ ಭಕ್ತಿಗೀತೆಗಳ ಸಂಗೀತ ಕಾರ್ಯಕ್ರಮ ಜರುಗಿತು. ಪ್ರಕಾಶ್‌ರಾವ್ ಉಡುಪಿ. ಕೀ ಬೋರ್ಡ್‌ನಲ್ಲೂ ಕರ್ವಾಲು ಹರಿಶ್ಚಂದ್ರ ರಾವ್ ತಬಲಾದಲ್ಲೂ ಈ ಕಾರ್ಯಕ್ರಮದಲ್ಲಿ ಸಹಕರಿಸಿದರು.

ಯಕ್ಷಗಾನ ಕ್ಷೇತ್ರದಲ್ಲಿ ಹೊಸತನದ ಶೋಧದಲ್ಲಿ ಕಲೆಗೆ ಮೆರುಗನ್ನಿತ್ತು ದೇಶ-ವಿದೇಶಗಳಲ್ಲಿ ಯಕ್ಷಗಾನದ ಕಂಪನ್ನು ಪಸರಿಸಿದ "ಇವ ನಮ್ಮವ, ಇವ ನಮ್ಮವ" ಎಂಬ ಕೀರ್ತಿಗೆ ಪಾತ್ರರಾಗಿರುವ ಯಕ್ಷದೇವ ಮಿತ್ರ ಮಂಡಳಿ ಮೂಡುಬಿದ್ರಿ-ಇದರ ಸ್ಥಾಪಕ ಎಂ ದೇವಾನಂದ ಭಟ್ ಹಾಗೂ ಶ್ರೀ ಅನಂತ ಪದ್ಮನಾಭ ದೇವಸ್ಥಾನ ಅನಂತಶಯನ ಕಾರ್ಕಳ-ಇದರ ಆಡಳಿತ ಮೊಕ್ತೇಸರರಾಗಿ ಅವಿರೋಧವಾಗಿ ಆಯ್ಕೆಗೊಂಡು ನಮ್ಮ ಸಮಾಜಕ್ಕೆ ಗೌರವ ತಂದ ಕೊಕ್ರಾಡಿ ರತ್ನಾಕರ ರಾವ್ ಇವರನ್ನೂ ಸನ್ಮಾನಿಸಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳಿಗೆ ಅಪಾರ ಸಂಖ್ಯೆಯಲ್ಲಿ ಬಂಧು-ಮಿತ್ರರು, ಹಿತೈಷಿಗಳು ಆಗಮಿಸಿ ಶ್ರೀ ದೇವರ ಕೃಪೆಗೆ ಪಾತ್ರರಾದರು.

## ಈಶ್ವರ ಮಂಗಲದಲ್ಲಿ ಹರಿಕಥೆ ಮತ್ತು ಪ್ರವಚನ

ಬಂಟ್ವಾಳ ತಾಲೂಕು ಸಜೀಪಮೂಡ ಗ್ರಾಮದ ಈಶ್ವರ ಮಂಗಲ ಶ್ರೀ ಸದಾಶಿವ ದೇವಸ್ಥಾನದ ಪುನಃ ಪ್ರತಿಷ್ಠಾಪನಾ ಅಷ್ಟಬಂಧ ಮತ್ತು ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ದಿನಾಂಕ 09-03-2016ರಂದು ಪೂರ್ವಾಹ್ನ ಶ್ರೀ ಅಡೂರು ಹರಿಕೃಷ್ಣ ರಾವ್, ಗ್ರಂಥಾಪಾಲರು, ಸಂಸ್ಕೃತ ಕಾಲೇಜು, ಉಡುಪಿ ಇವರಿಂದ ' ಸದಾಶಿವ ವಿಶ್ವದರ್ಶನ' ಎಂಬ ವಿಷಯದಲ್ಲಿ ಪ್ರವಚನವು ಜರುಗಿತು.

ಇದೇ ದಿನ ಅಪರಾಹ್ನ ಹರಿದಾಸ ಶ್ರೀ ಮ.ನಾ.ಹೆಬ್ಬಾರ, ಇವರಿಂದ 'ಗಿರಿಜಾ ಕಲ್ಯಾಣ' ಎಂಬ ಕಥಾ ಭಾಗದ ಹರಿಕಥಾ ಕಾರ್ಯಕ್ರಮವು ಜರುಗಿತು. ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಂ.ಸುಬ್ರಹ್ಮಣ್ಯ ಭಟ್, ಇವರು ಆರಂಭದಲ್ಲಿ (ಎರಡು ಕಾರ್ಯಕ್ರಮಗಳಲ್ಲಿ) ಅತಿಥಿಗಳನ್ನು ಪರಿಚಯಿಸಿ, ಸ್ವಾಗತಿಸಿದರು. ಅಧ್ಯಕ್ಷರಾದ ಶ್ರೀ ಬಿ. ಸದಾನಂದ ಪೂಂಜರು ಇಬ್ಬರು ಅತಿಥಿಗಳನ್ನೂ ಹಾರ ಶಾಲು, ನೆನಪಿನ ಕಾಣಿಕೆಗಳೊಂದಿಗೆ ಸನ್ಮಾನಿಸಿದರು. ಕೊನೆಯಲ್ಲಿ ಕಾರ್ಯಕ್ರಮದ ಸಂಯೋಜಕರಾದ ವೇ.ಮೂ ಸುದರ್ಶನ ಮಯ್ಯ, ಕೊಳಕೆ ಇವರು ಇಬ್ಬರು ಅತಿಥಿ ಕಲಾವಿದರುಗಳನ್ನು ಗೌರವಿಸಿದರು

## "ಫ್ರೆಂಡ್ಸ್ ಗ್ರೂಪ್" : "ರಕ್ತದಾನ ಶಿಬಿರ"

ಸಮಾಜ ಸೇವೆಯನ್ನೇ ಧ್ಯೇಯವಾಗಿಟ್ಟುಕೊಂಡು ಪ್ರಾರಂಭವಾದ "ಫ್ರೆಂಡ್ಸ್ ಗ್ರೂಪ್" ಉಡುಪಿ ಇವರು ವರ್ಷಂಪ್ರತಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿದ್ದಾರೆ. ಅದರಲ್ಲಿ ಬಹಳ ಪ್ರಮುಖವಾದುದು "ರಕ್ತದಾನ ಶಿಬಿರ". ಕಳೆದ ಹಲವಾರು ವರುಷಗಳಿಂದ ಮಣಿಪಾಲ ಕೆ.ಎಮ್.ಸಿ ಆಸ್ಪತ್ರೆಯ ರಕ್ತನಿಧಿಯಲ್ಲಿ ಮತ್ತು ಕುಂಜಿಬೆಟ್ಟು ಉಪೇಂದ್ರ ಪೈ ಮೆಮೋರಿಯಲ್ ಕಾಲೇಜಿನಲ್ಲಿ ಈ ಶಿಬಿರಗಳನ್ನು ಏರ್ಪಡಿಸುತ್ತಾ ಬರುತ್ತಿದ್ದು ಈ ಸಲವೂ 27-02-2016 ರಂದು ಬೆಳಗ್ಗೆ 9-00 ಗಂಟೆಗೆ ಕೆ.ಎಮ್.ಸಿ ರಕ್ತನಿಧಿ ವಿಭಾಗದ ವೈದ್ಯಾಧಿಕಾರಿ ಡಾ ಮನೀಷ್ ರತೂರಿ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಪೋಲೀಸ್ ವರಿಷ್ಠಾಧಿಕಾರಿ ಅಣ್ಣಾಮಲೈ ಶಿಬಿರವನ್ನು ಸಂದರ್ಶಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಮಧುಸೂದನ ಭಟ್, ಶಿಕ್ಷಕ ವೃಂದ, ಸಿಬ್ಬಂಧಿ ವರ್ಗ, ವಿದ್ಯಾರ್ಥಿಗಳು ಹಾಗೂ ಫ್ರೆಂಡ್ಸ್ ಗ್ರೂಪ್ ಉಡುಪಿಯ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು. 600ಕ್ಕೂ ಮಿಕ್ಕಿದ ರಕ್ತದಾನಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಕರಂಬಳ್ಳಿ ವಸಂತರಾವ್ ಇವರ ನೇತೃತ್ವದಲ್ಲಿ ನಡೆದ ಈ ಸಮಾರಂಭದಲ್ಲಿ ಕರಂಬಳ್ಳಿ ವೆಂಕಟರಾವ್, ಕರಂಬಳ್ಳಿ ಮೋಹನ ರಾವ್, ಅಂಬಲಪಾಡಿ ಚಿದಂಬರ ಶ್ಯಾನ್‌ಭಾಗ್, ಉಂಡಾರು ಕೃಷ್ಣಾನಂದ ರಾವ್, ಹೆರ್ಗ ನಿರಂಜನ ರಾವ್, ವೈ.ಮೋಹನ ರಾವ್, ಟಿ. ಜಗದೀಶ ರಾವ್, ಐ.ಕೆ. ಜಯಚಂದ್ರ ರಾವ್, ಎನ್ ಉಮೇಶ್ ರಾವ್, ಎನ್ ಉದಯಚಂದ್ರ ರಾವ್, ಎ. ಧರ್ಮೇಂದ್ರ ಹೆಬ್ಬಾರ್, ಮಹೇಶ್ ರಾವ್, ಅಜಿತ್ ರಾವ್, ಮಂಜುನಾಥ ರಾವ್, ವಿಕೇಶ್ ರಾವ್, ಬಿ. ಸುರೇಶ್ ರಾವ್, ವಿಜೇತ ರಾವ್, ಭವಾನಿ ರಾವ್ ಇವರುಗಳು ಸರ್ವ ಸಹಕಾರವನ್ನು ನೀಡಿರುವವರು. ಹಾಗೆಯೇ ನಮ್ಮ ಶಾರದಾ ಮಂಟಪದ ಕಾರ್ಯಕಾರೀ ಸಮಿತಿ ಸದಸ್ಯರೆಲ್ಲರೂ ಶುಭಾಶಯವನ್ನು ನೀಡಿ ಪ್ರೋತ್ಸಾಹಿಸಿರುವರು.

## ವಿಶಿಷ್ಟ ರೀತಿಯಲ್ಲಿ ಜನ್ಮದಿನಾಚರಣೆ

ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಬಿ. ಜಯರಾಮ ರಾಯರು ತಮ್ಮ ಹುಟ್ಟುಹಬ್ಬವನ್ನು ಜಯಂಟ್ಸ್ ಉಡುಪಿ ಇದರ ಸದಸ್ಯರೊಂದಿಗೆ ಕಲ್ಯಾಣಪುರದ ವಿಶೇಷ ಸಾಮರ್ಥ್ಯದ ಮಕ್ಕಳ ವಸತಿ ಶಾಲೆಯ ಮಕ್ಕಳೊಂದಿಗೆ ತಾ.29-03-2016ರಂದು ವಿಶಿಷ್ಟವಾಗಿ ಆಚರಿಸಿದರು. ಶಾಲೆಗೆ ಅಕ್ವಾಗಾರ್ಡ್, ದವಸಧಾನ್ಯ ಹಾಗೂ ಇತರ ಆಹಾರ ಸಾಮಗ್ರಿ, ಸಾಬೂನುಗಳು ಹಾಗೂ ಬಟ್ಟೆಬರೆಗಳನ್ನು ಕೊಡುಗೆಯಾಗಿ ನೀಡಿದರು. ಅವರೊಂದಿಗೆ ಅವರ ಪತ್ನಿ ವೀಣಾಜಯರಾಮ್ ಹಾಗೂ ಸಹೋದರಿ ರಾಜೇಶ್ವರಿ ಶುಭಕರ್ ಜೊತೆಗಿದ್ದರು.

ಉಡುಪಿ ಜಯಂಟ್ಸ್‌ನ ಅಧ್ಯಕ್ಷ ರಮೇಶ್ ಪೂಜಾರಿ, ಸ್ಥಾಪಕ ಅಧ್ಯಕ್ಷ ಹಾಗೂ ಶ್ರೀ ಶಾರದಾ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಶ್ರೀ ಕೆ. ವೇಣುಗೋಪಾಲ್‌ರಾವ್, ಸ್ಪಂದನದ ಟ್ರಸ್ಟಿ ವಿವೇಕಾನಂದ ಕಾಮತ್ ಉಪಸ್ಥಿತರಿದ್ದರು.

ಶ್ರೀ ಬಿ.ಜಯರಾಮರಾಯರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಹಾಗೂ ಶ್ರೀ ಶಾರದಾಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

# ಮಟ್ಟು ಕೃಷ್ಣಕುಮಾರ್ ರಾವ್‌ರವರ ಬೀಳ್ಗೊಡುಗೆ ಸಮಾರಂಭ...





"ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಬೋಧನೆಯೊಂದಿಗೆ ನೈತಿಕ ತಿಳುವಳಿಕೆ, ಸಾಂಸ್ಕೃತಿಕ ಚಟುವಟಿಕೆ, ಧಾರ್ಮಿಕ ನಂಬಿಕೆ ಹಾಗೂ ಜೀವನ ಸಂಸ್ಕಾರವನ್ನು ಕಲಿಸುವ ಗುರುವನ್ನು ಸಮಾಜವು ಸದಾ ನೆನಪಿನಲ್ಲಿರಿಸಿಕೊಳ್ಳುತ್ತದೆ. ಅಂತಹ ಶಿಕ್ಷಕರೊಬ್ಬರನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮವನ್ನು ನಾವಿಲ್ಲಿ ಕಾಣುತ್ತಿದ್ದೇವೆ." ಎಂದು ಉಡುಪಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ರವಿಶಂಕರ್ ರಾವ್ ನುಡಿದರು.

ಅವರು ಉದ್ಯಾವರದ ಹಿಂದೂ ಹಿರಿಯ ಪ್ರಾಥಮಿಕ ಶಾಲಾ ಸಹ ಶಿಕ್ಷಕರಾಗಿದ್ದು, ನಿವೃತ್ತಿಗೊಳ್ಳುತ್ತಿರುವ ಶ್ರೀ ಕೃಷ್ಣಕುಮಾರ್ ರಾವ್ ಇವರ ಬೀಳ್ಗೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದು ಹೀಗೆ ನುಡಿದರು. ಇನ್ನೋರ್ವ ಅತಿಥಿಗಳಾಗಿದ್ದ ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ। ಎಸ್.ಎಲ್. ಕಾರ್ಣಿಕ್ ಮಾತನಾಡಿ ಬಹುಮುಖ ಪ್ರತಿಭೆಯ ಶ್ರೀ ಕೃಷ್ಣಕುಮಾರ್ ರಾವ್ ತಾವು ಮಾಡಿದ ಸೇವೆಯಿಂದ ಇಂದು ಗುರುತಿಸಿಕೊಂಡಿದ್ದಾರೆ. ಇವರ ಯಕ್ಷಗಾನ, ನಾಟಕ, ಹಾಗೂ ಸಾಹಿತ್ಯಿಕ ಬರವಣಿಗೆಯ ಚಟುವಟಿಕೆಗಳು ಇನ್ನು ಮುಂದೆಯೂ ನಿರಂತರವಾಗಿ ಮುನ್ನಡೆಯಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ನಿವೃತ್ತಿಗೊಳ್ಳುತ್ತಿರುವ ಶಿಕ್ಷಕ ಶ್ರೀ ಕೃಷ್ಣಕುಮಾರ್ ರಾವ್ ಅವರಿಗೆ ಶಾಲು, ಹಾರ ಫಲ ಪುಷ್ಪ ಹಾಗೂ ಚಿನ್ನದ ಉಂಗುರ ಮತ್ತು ಅವರ ಪತ್ನಿ ಶ್ರೀಮತಿ ಗೀತಾ ಕೆ ರಾವ್ ಅವರಿಗೆ ಸೀರೆ, ಅರಸಿನ-ಕುಂಕುಮ, ಹೂ ನೀಡಿ ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಶಾಲಾ ಆಡಳಿತ ಸಮಿತಿಯ ಅಧ್ಯಕ್ಷರಾದ ಡಾ।ಯು ಎನ್ ಮಯ್ಯ ನಿರ್ವಹಿಸಿದರು. ಶಾಲಾ ಸಂಚಾಲಕರಾದ ಶ್ರೀ ಉದ್ಯಾವರ ನಾಗೇಶ್ ಕುಮಾರ್, ಮುಖ್ಯೋಪಾಧ್ಯಾಯರಾದ ಶ್ರೀ ಗಣಪತಿ ಕಾರಂತ್, ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷರಾದ ಶ್ರೀಮತಿ ಸುನೀತಾ ನಟರಾಜ್, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಮುರಳೀಕೃಷ್ಣ ಭಟ್, ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಗಿರೀಶ್ ಕುಮಾರ್, ವಿದ್ಯಾರ್ಥಿ ನಾಯಕ ಆಯುಷ್ ಎಸ್ ಶೆಟ್ಟಿ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಹ ಶಿಕ್ಷಕಿ ಶ್ರೀಮತಿ ಹೇಮಲತಾ ಪ್ರಾಸ್ತಾವಿಕ ಮಾತನಾಡಿದರು. ಶ್ರೀ ಮ್ಯಾಕ್ಸಿಂ ಡಿ'ಸಿಲ್ವ ವಂದನಾರ್ಪಣೆ ಮಾಡಿದರು. ಶ್ರೀಮತಿ ರತ್ನಾವತಿ ಕಾರ್ಯಕ್ರಮ ಸಂಯೋಜನೆ ಮಾಡಿದರು.

## ಪರೀಕ ಚಂದ್ರಶೇಖರ್‌ರಾವ್ ನಿಧನ

ನಮ್ಮ ಸಂಘದ ನಿರ್ದೇಶಕರಾಗಿ ಸಂಘದ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದ ಶ್ರೀ ಪರೀಕಚಂದ್ರಶೇಕರರಾಯರು ತಾ.26-03-2016ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಶ್ರೀಯುತರಿಗೆ 69 ವರ್ಷ ಪ್ರಾಯವಾಗಿತ್ತು. ಪರೀಕರಾಮರಾವ್ ಹಾಗೂ ಸತ್ಯಮ್ಮ ದಂಪತಿಗಳ ಪುತ್ರನಾದ ಇವರು ಪರೀಕದಲ್ಲಿ ಪ್ರಗತಿಪರ ಕೃಷಿಕರಾಗಿ, ಸಂಘ ಸಂಸ್ಥೆಗಳಿಗೆ ಕೊಡುಗೈದಾನಿಯಾಗಿ ಪ್ರಸಿದ್ಧರು. ಹಿರಿಯಡ್ಕದ ರೋಟರೀ ಸಂಸ್ಥೆಯಿಂದ ಉತ್ತಮ ಪ್ರಗತಿಪರ ಕೃಷಿಕನೆಂದು ಸನ್ಮಾನಿಸಲ್ಪಟ್ಟಿದ್ದರು. ಭಕ್ತಿಗೀತೆಗಳ ರಚನೆ ಹಾಗೂ ಭಜನೆ ಇವರ ಹವ್ಯಾಸ. ಅವರ ಭಕ್ತಿಗೀತೆಗಳು ಈ ಹಿಂದೆ ಶಾರದಾ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಶ್ರೀಯುತರ ಪತ್ನಿ ಶ್ರೀಮತಿ ಸಾವಿತ್ರಿ ಇವರು ಕಳೆದ ವರ್ಷ ಗ್ರಾಮಪಂಚಾಯತ್ ಸದಸ್ಯೆಯಾಗಿ ಆಯ್ಕೆಯಾಗಿದ್ದರು. ಇವರು ಪತ್ನಿ ಹಾಗೂ ನಾಲ್ಕು ಮಕ್ಕಳನ್ನು ಅಗಲಿರುವರು. ಇವರ ಆತ್ಮಕ್ಕೆ ಚಿರಶಾಂತಿಯನ್ನು ಹಾಗೂ ಕುಟುಂಬಕ್ಕೆ ಅವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಶ್ರೀ ಶಾರದಾ ಬಳಗವು ಪ್ರಾರ್ಥಿಸುತ್ತದೆ.

## ಶ್ರೀ ಶಾರದಾದೇವಸ್ಥಾನಕ್ಕೆ ಭಕ್ತಿಪೂರ್ವಕ ಕೊಡುಗೆ

ಶ್ರೀ ಶಾರದಾ ದೇವಳಕ್ಕೆ ಆಗಮಿಸುವ ಭಕ್ತರಿಗೆ ಸುಡುಬಿಸಿಲಿನಲ್ಲಿ ಸುಡುತ್ತಿರುವ ನೆಲದಿಂದ ಕಷ್ಟವಾಗುತ್ತಿರುವುದನ್ನು ಮನಗಂಡು ಶ್ರೀ ಮಾಂಟ್ರಾಡಿ ಮೋಹನರಾಯರು ಸ್ವಯಂ ಸ್ಫೂರ್ತಿಯಿಂದ ಆಡಳಿತ ಮಂಡಳಿಯನ್ನು ಸಂಪರ್ಕಿಸಿ ಸ್ವಾಗತಗೋಪುರದಿಂದ ದೇವಳದ ಬಾಗಿಲಿನ ತನಕ ಪ್ಲಾಸ್ಟಿಕ್‌ನ ಮ್ಯಾಟ್‌ಅನ್ನು ಸುಮಾರು ಹದಿನೈದು ಸಾವಿರ ರೂ ವೆಚ್ಚದಲ್ಲಿ ಅಳವಡಿಸಿದ್ದಾರೆ. ಕೀರ್ತಿಶೇಷ ಮಾಂಟ್ರಾಡಿ ಗೋವಿಂದರಾವ್ ಮತ್ತು ಕೀರ್ತಿಶೇಷ ಗಂಗಮ್ಮನವರ ಪಂಚಮ ಪುತ್ರನಾದ ಶ್ರೀಯುತರು ಕೇಂದ್ರ ಸರಕಾರದ ಅಬಕಾರಿ ಹಾಗೂ ಸುಂಕ ಇಲಾಖೆಯಲ್ಲಿ ಸ್ಮಗ್ಲಿಂಗ್ ನಿರೋಧ ಯೂನಿಟ್‌ನ ಅಧೀಕ್ಷಕರಾಗಿ ನಿವೃತ್ತರಾದವರು. ಉಡುಪಿಯ ಕಕ್ಕುಂಜೆ ಅಂಬಾಗಿಲಿನಲ್ಲಿ ತಮ್ಮ ಸ್ವಗೃಹ ಶ್ರೀ ಸಾಯಿಕೃಪಾ ನಿಲಯದಲ್ಲಿ ಪತ್ನಿ ಶ್ರೀಮತಿ ಸವಿತಾ (ನಿವೃತ್ತ ಅಧ್ಯಾಪಕಿ)ರೊಂದಿಗೆ ವಾಸವಾಗಿದ್ದಾರೆ. ಶ್ರೀ ಶಾರದೆಯ ಭಕ್ತರಾದ ಶ್ರೀಯುತರಿಗೆ ಆಡಳಿತ ಮಂಡಳಿಯು ಕೃತಜ್ಞತೆಗಳನ್ನು ಅರ್ಪಿಸುತ್ತದೆ.



ಶ್ರೀ ಶಾರದಾ ಪತ್ರಿಕೆಗೆ ಶುಭಕೋರುವ
ಶ್ರೀಮತಿ ಸವಿತ ಮತ್ತು ಮಾಂಟ್ರಾಡಿ ಮೋಹನ್‌ರಾವ್
ಶ್ರೀಮತಿ ಡಾ. ಪ್ರಶಾಂತಿ ಮತ್ತು ಶ್ರೀ ಟಿ.ಎನ್ ವಾದಿರಾಜನ್
ಶ್ರೀಮತಿ ಪೃಥ್ವಿ ಮತ್ತು ಶ್ರೀ ಸುರೇಶ್‌ರಾವ್ ಬಳ್ಳಮಂಜ
ಮೊಮ್ಮಕ್ಕಳಾದ ಅಹನ ಹತ್ವಾರ್ ಮತ್ತು ಸಾಯಿಸೃಜನ್

## ಶ್ರದ್ಧಾಂಜಲಿ



ಪರೀಕ ಚಂದ್ರಶೇಖರ ರಾವ್

ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಹಾಗೂ ಕುಟುಂಬಕ್ಕೆ
ಅಗಲಿಕೆಯನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುವ,

**ಅಧ್ಯಕ್ಷರು ಹಾಗೂ ಸರ್ವಸದಸ್ಯರು**
ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.




ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


ಶ್ರೀ ಅಡೂರು ಹರಿಕೃಷ್ಣ ರಾವ್ ಹಾಗೂ ಶ್ರೀ ಮ.ನಾ.ಹೆಬ್ಬಾರರವರ ಪ್ರವಚನ-ಹರಿಕಥೆ


ಹುಟ್ಟುಹಬ್ಬ ಆಚರಿಸುತ್ತಿರುವ ಶ್ರೀ ಬಿ. ಜಯರಾಮ ರಾವ್


ಹಿರಿಯ ನಾಗರಿಕರ ವೇದಿಕೆಯ ಪ್ರಶಸ್ತಿ ಸ್ವೀಕರಿಸುತ್ತಿರುವ ಶ್ರೀ ಸಿ.ಎಸ್.ರಾವ್


ವೈ. ಭುವನೇಂದ್ರ ರಾಯರ ಅಧ್ಯಕ್ಷತೆಯಲ್ಲಿ ಪುಸ್ತಕ ಬಿಡುಗಡೆ



ರಕ್ತದಾನ ಶಿಬಿರದಲ್ಲಿ ಫ್ರೆಂಡ್ಸ್ ಗ್ರೂಪ್ ಅಧ್ಯಕ್ಷ ಶ್ರೀ ವಸಂತ ರಾವ್ ಕರಂಬಳ್ಳಿ


ಡಾ| ವೈ. ರವೀಂದ್ರನಾಥ ರಾವ್‌ರವರ ಸನ್ಮಾನ ಸಮಾರಂಭ

## ಚಿಣ್ಣರ ಅಂಗಳ


ಪ್ರಜ್ವಲ್, 6ನೇ ತರಗತಿ
ಮೂರ್ನಾಡ್ ಜ್ಞಾನಜ್ಯೋತಿ ಶಾಲೆ


ಪ್ರಮಿತಿ ಉಡುಪಿ


ಅನಘ ರಾವ್, 5ನೇ ತರಗತಿ
ಬಿ.ಜಿ.ಎಸ್.ಎನ್.ಪಿ.ಎಸ್. ಶಾಲೆ, ಬೆಂಗಳೂರು


With Best Compliments From :


SMT. VIDYA & SRI K. VASUDEVA RAO

*Deepika Digital Studio & Video*
*Deepika International Travels*

WE UNDERTAKE

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assitance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org